ಸಂಪುಟ: 01 ಸಂಚಿಕೆ: 98 ಪುಟ: 04 ಬೆಲೆ: 02 ಗುರುವಾರ ಸೆಪ್ಟೆಂಬರ್ 24 2026 ಮೊ: 7411699198/7406928404

# ಅಜಾತ ಶತ್ರು

ಪ್ರದೀಪಕುಮಾರ
ಸಂಪಾದಕರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ




Volume:01 Issue: 98 Pages:04 Price:02 THURSDAY SEPTEMBER 24 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ಹುಟ್ಟು ಭ್ರಮೆಯನ್ನೆಲ್ಲ ಕಳಚಿಟ್ಟಾಗ ಬಾಳಿನ ನಶ್ವರತೆಯೊಳಡಗಿರುವ ಸತ್ಯದ ದರ್ಶನವಾಗುತ್ತದೆ.



ವಾಣಿ ಭಂಡಾರಿ.

# ಜಿಬಿಎ ವ್ಯಾಪ್ತಿಯ ಶಾಲಾ ಮಕ್ಕಳಿಗೆ ಇನ್ನೂ ಸಿಕ್ಕಿಲ್ಲ ಶೂ, ಸಾಕ್ಸ್, ಬ್ಯಾಗ್, ಸ್ವೆಟರ್‌ಗಳು

**ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಶಾಲಾ-ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ವಿದ್ಯಾರ್ಥಿಗಳಿಗೆ ದೊರೆಯಬೇಕಾದ ಅಗತ್ಯ ಮೂಲಭೂತ ಸೌಲಭ್ಯಗಳು ದೊರಕುತ್ತಿಲ್ಲ ಎಂಬ ಆರೋಪಗಳು ಕೇಳಿ ಬಂದಿದೆ. ಶೈಕ್ಷಣಿಕ ವರ್ಷ ಶುರುವಾಗಿ ನಾಲ್ಕು ತಿಂಗಳು ಕಳೆದರೂ ಜಿಬಿಎ ವ್ಯಾಪ್ತಿಯ ನಗರ ಪಾಲಿಕೆ ಶಾಲೆ-ಕಾಲೇಜುಗಳ ಸುಮಾರು 23 ಸಾವಿರ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್, ಶಾಲಾ ಬ್ಯಾಗ್ ಹಾಗೂ ಸ್ವೆಟರ್ ವಿತರಣೆಯಾಗಿಲ್ಲ.**

ಅಧಿಕಾರಿಗಳ ಈ ದಿವ್ಯ ನಿರ್ಲಕ್ಷ್ಯದಿಂದ ಪಾಲಿಕೆ ಶಾಲೆಗಳಲ್ಲಿ ಓದುತ್ತಿರುವ ಬಡ ಹಾಗೂ ಕೂಲಿ ಕಾರ್ಮಿಕರ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿಗಳು ಹಲವಾರು ಸಮಸ್ಯೆ ಎದುರಿಸುವಂತಾಗಿದೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉಚಿತವಾಗಿ ಅಗತ್ಯ ಶೈಕ್ಷಣಿಕ ಪರಿಕರಗಳನ್ನು ಒದಗಿಸುವ ಯೋಜನೆಗಳಿದ್ದರೂ, ಅವುಗಳ ಅನುಷ್ಠಾನದಲ್ಲಿನ ವಿಳಂಬ ಪೋಷಕರ ಅಸಮಾಧಾನಕ್ಕೆ ಕಾರಣವಾಗಿದೆ. ಮಕ್ಕಳಿಗೆ ಸಮಯಕ್ಕೆ ಅಗತ್ಯ ಸೌಲಭ್ಯ ಸಿಗಬೇಕಾದರೆ ಟೆಂಡರ್ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂಬ ಒತ್ತಾಯ ಕೇಳಿಬಂದಿದೆ.

ಟೆಂಡರ್‌ಗೆ ಸ್ಪಂದನೆಯೇ ಇಲ್ಲ: ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ಮತ್ತು ಬ್ಯಾಗ್ ಒದಗಿಸಲು ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ ಎರಡು ಬಾರಿ ಟೆಂಡರ್ ಕರೆದರೂ ಗುತ್ತಿಗೆದಾರರು ಭಾಗವಹಿಸಿಲ್ಲ ಎನ್ನಲಾಗಿದೆ. ಇದೀಗ ಮೂರನೇ ಬಾರಿ ಟೆಂಡರ್ ಆಹ್ವಾನಿಸಲಾಗಿದೆ.ಮೂರನೇ ಟೆಂಡರ್‌ಗೆ ಗುತ್ತಿಗೆದಾರರಿಂದ ಸ್ಪಂದನೆ ದೊರೆತರೆ, ಮುಂದಿನ ಹಂತದಲ್ಲಿ ಟೆಂಡರ್



> “ ಈ ಹಿನ್ನೆಲೆಯಲ್ಲಿ ಪೋಷಕರ ಬ್ಯಾಂಕ್ ಖಾತೆ ವಿವರಗಳನ್ನು ಸಂಗ್ರಹಿಸುವ ಪ್ರಕ್ರಿಯೆಯೂ ನಡೆಯುತ್ತಿದೆ. ಆದರೆ ಈ ಪ್ರಕ್ರಿಯೆಗೆ ಸುಮಾರು ಮೂರು ತಿಂಗಳ ಕಾಲಾವಕಾಶ ಬೇಕಾಗಬಹುದು ಎನ್ನಲಾಗಿದ್ದು, ಅಷ್ಟರೊಳಗೆ ಮಕ್ಕಳಿಗೆ ಸೌಲಭ್ಯಗಳು ದೊರೆಯಲಿವೆಯೇ ಎಂಬ ಪ್ರಶ್ನೆ ಕಾಡತೊಡಗಿದೆ. ಕಳೆದ ಶೈಕ್ಷಣಿಕ ವರ್ಷದಲ್ಲೂ ಸ್ವೆಟರ್ ವಿತರಣೆಗೆ ಟೆಂಡರ್ ಕರೆದಿದ್ದರೂ, ಶೈಕ್ಷಣಿಕ ವರ್ಷ ಮುಗಿಯುವವರೆಗೂ ಹಲವು ವಿದ್ಯಾರ್ಥಿಗಳಿಗೆ ಸ್ವೆಟರ್ ಸಿಕ್ಕಿರಲಿಲ್ಲ ಎಂಬ ಆರೋಪವೂ ಕೇಳಿಬಂದಿದೆ. ವಿಳಂಬಕ್ಕೆ ಕಾರಣವೇನು..? ವಿದ್ಯಾರ್ಥಿಗಳಿಗೆ ಅಗತ್ಯ ವಸ್ತುಗಳನ್ನು ಒದಗಿಸುವ ಪ್ರಕ್ರಿಯೆಯಲ್ಲಿ ಪದೇಪದೇ ಟೆಂಡರ್ ವಿಫಲವಾಗುತ್ತಿರುವುದಕ್ಕೆ ಕಾರಣವೇನು ಎಂಬ ಪ್ರಶ್ನೆ ಇದೀಗ ಎದುರಾಗಿದೆ.

ಅಂತಿಮಗೊಳಿಸಿ ವಿದ್ಯಾರ್ಥಿಗಳಿಗೆ ಅಗತ್ಯ ವಸ್ತುಗಳನ್ನು ವಿತರಿಸಲಾಗುವುದು ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.ಇದರಿಂದ ಶೈಕ್ಷಣಿಕ ವರ್ಷ ಆರಂಭವಾದರೂ ಮಕ್ಕಳಿಗೆ ಸಿಗಬೇಕಾದ ಸೌಲಭ್ಯಗಳು ಟೆಂಡರ್ ಪ್ರಕ್ರಿಯೆಯಲ್ಲೇ ಸಿಲುಕಿರುವಂತಾಗಿದೆ. ಇನ್ನು ಶೂ ಮತ್ತು ಸ್ವೆಟರ್ ಖರೀದಿಗೆ ಹಣವನ್ನು ಪೋಷಕರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡುವ ಕುರಿತು ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿದುಬಂದಿದೆ.

ಈ ಹಿನ್ನೆಲೆಯಲ್ಲಿ ಪೋಷಕರ ಬ್ಯಾಂಕ್ ಖಾತೆ ವಿವರಗಳನ್ನು ಸಂಗ್ರಹಿಸುವ ಪ್ರಕ್ರಿಯೆಯೂ ನಡೆಯುತ್ತಿದೆ. ಆದರೆ ಈ ಪ್ರಕ್ರಿಯೆಗೆ ಸುಮಾರು ಮೂರು ತಿಂಗಳ ಕಾಲಾವಕಾಶ ಬೇಕಾಗಬಹುದು ಎನ್ನಲಾಗಿದ್ದು, ಅಷ್ಟರೊಳಗೆ ಮಕ್ಕಳಿಗೆ ಸೌಲಭ್ಯಗಳು ದೊರೆಯಲಿವೆಯೇ ಎಂಬ ಪ್ರಶ್ನೆ ಕಾಡತೊಡಗಿದೆ. ಕಳೆದ ಶೈಕ್ಷಣಿಕ ವರ್ಷದಲ್ಲೂ ಸ್ವೆಟರ್ ವಿತರಣೆಗೆ ಟೆಂಡರ್ ಕರೆದಿದ್ದರೂ, ಶೈಕ್ಷಣಿಕ ವರ್ಷ ಮುಗಿಯುವವರೆಗೂ ಹಲವು ವಿದ್ಯಾರ್ಥಿಗಳಿಗೆ ಸ್ವೆಟರ್ ಸಿಕ್ಕಿರಲಿಲ್ಲ ಎಂಬ ಆರೋಪವೂ ಕೇಳಿಬಂದಿದೆ.

ವಿಳಂಬಕ್ಕೆ ಕಾರಣವೇನು..? ವಿದ್ಯಾರ್ಥಿಗಳಿಗೆ ಅಗತ್ಯ ವಸ್ತುಗಳನ್ನು ಒದಗಿಸುವ ಪ್ರಕ್ರಿಯೆಯಲ್ಲಿ ಪದೇಪದೇ ಟೆಂಡರ್ ವಿಫಲವಾಗುತ್ತಿರುವುದಕ್ಕೆ ಕಾರಣವೇನು ಎಂಬ ಪ್ರಶ್ನೆ ಇದೀಗ ಎದುರಾಗಿದೆ.

ಟೆಂಡರ್‌ನಲ್ಲಿ ಗುತ್ತಿಗೆದಾರರು ಭಾಗವಹಿಸದಿರುವುದಕ್ಕೆ ಕಾರಣವೇನು? ದರ ನಿಗದಿ ಅಥವಾ ಷರತ್ತುಗಳಲ್ಲಿ ಸಮಸ್ಯೆಯಿದೆಯೇ? ಎಂಬ ಬಗ್ಗೆ ಜಿಬಿಎ ಶಿಕ್ಷಣ ಇಲಾಖೆ ಸ್ಪಷ್ಟನೆ ನೀಡಬೇಕೆಂಬ ಆಗ್ರಹ ಕೇಳಿಬಂದಿದೆ. ಇನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಅನಗತ್ಯ ವಿಳಂಬ ಅಥವಾ ಅಕ್ರಮಗಳಿಗೆ ಅವಕಾಶವಿದೆಯೇ ಎಂಬ ಬಗ್ಗೆಯೂ ಕೆಲವರು ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಆರೋಪಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಬೇಕಾಗಿದೆ.

ಮಕ್ಕಳಿಗೆ ಸೌಲಭ್ಯ ಯಾವಾಗ..?

ಖಾಸಗಿ ಶಾಲೆಗಳಿಗೆ ಸರಿಸಾಟಿಯಾಗಿ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜತೆಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ ಶೂ, ಸಾಕ್?ಸ, ಬ್ಯಾಗ್ ಹಾಗೂ ಸ್ವೆಟರ್‌ನಂತಹ ಮೂಲಭೂತ ಸೌಲಭ್ಯಗಳನ್ನೇ ಶೈಕ್ಷಣಿಕ ವರ್ಷದ ಆರಂಭದಲ್ಲೇ ಒದಗಿಸಲು ಸಾಧ್ಯವಾಗದಿರುವುದು ವ್ಯವಸ್ಥೆಯ ಕಾರ್ಯವೈಖರಿ ಬಗ್ಗೆ ಪ್ರಶ್ನೆ ಮೂಡಿಸಿದೆ. ಬಡ ಕುಟುಂಬಗಳ ಮಕ್ಕಳು ಸರ್ಕಾರಿ ಶಾಲೆಗಳ ಉಚಿತ ಸೌಲಭ್ಯಗಳನ್ನೇ ಅವಲಂಬಿಸಿರುವುದರಿಂದ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಯಾವುದೇ ವಿಳಂಬವಿಲ್ಲದೆ ಮಕ್ಕಳಿಗೆ ಅಗತ್ಯ ಪರಿಕರಗಳನ್ನು ಒದಗಿಸಬೇಕು ಎಂಬುದು ಪೋಷಕರ ಆಗ್ರಹವಾಗಿದೆ.

## ಪೌರಕಾರ್ಮಿಕರೊಂದಿಗೆ ಉಪಾಹಾರ ಸೇವಿಸಿದ ಸಚಿವ ಬಾಲಕೃಷ್ಣ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಪೌರ ಕಾರ್ಮಿಕರ ದಿನಾಚರಣೆ ಅಂಗವಾಗಿ ಪೌರಾಡಳಿತ ಸಚಿವರಾದ ಹೆಚ್.ಸಿ. ಬಾಲಕೃಷ್ಣ ಅವರು ಇಂದು ಪೌರ ಕಾರ್ಮಿಕರೊಂದಿಗೆ ಬೆಳಗಿನ ಉಪಾಹಾರ ಸೇವಿಸಿ, ಮಾತುಕತೆ ನಡೆಸಿದರು.**



ನಗರಗಳ ಸ್ವಚ್ಛತೆ, ನೈರ್ಮಲ್ಯ ಹಾಗೂ ಆರೋಗ್ಯಕರ ಪರಿಸರವನ್ನು ಕಾಪಾಡುವಲ್ಲಿ ಪೌರಕಾರ್ಮಿಕರ ಸೇವೆ ಅತ್ಯಂತ ಮಹತ್ವದ್ದಾಗಿದೆ. ಪ್ರತಿನಿತ್ಯ ಜನರ ಆರೋಗ್ಯ ಮತ್ತು ನಗರಗಳ ಸ್ವಚ್ಛತೆಗಾಗಿ ನಿಸ್ವಾರ್ಥವಾಗಿ ಶ್ರಮಿಸುತ್ತಿರುವ ಪೌರಕಾರ್ಮಿಕರ ಪರಿಶ್ರಮ ಹಾಗೂ ಸೇವೆಯನ್ನು ಸಚಿವರು ಈ ಸಂದರ್ಭದಲ್ಲಿ ಶ್ಲಾಘಿಸಿದರು. ಪೌರಕಾರ್ಮಿಕರೊಂದಿಗೆ ಉಪಾಹಾರ ಸೇವಿಸುವ ಮೂಲಕ ಅವರೊಂದಿಗೆ ಆತ್ಮೀಯವಾಗಿ ಬೆರೆತು, ಅವರ ಕರ್ತವ್ಯ, ಸಮಸ್ಯೆಗಳು ಹಾಗೂ ಅಗತ್ಯತೆಗಳ ಕುರಿತು ಮಾತುಕತೆ ನಡೆಸಿದರು. ಪೌರಕಾರ್ಮಿಕರ ಕಲ್ಯಾಣ ಹಾಗೂ ಅವರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಸದಾ ಬದ್ಧವಾಗಿದೆ ಎಂದು ತಿಳಿಸಿದರು. ಪೌರಕಾರ್ಮಿಕರ ಸೇವೆಯನ್ನು ಗೌರವಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದ್ದು, ಅವರ ಪರಿಶ್ರಮಕ್ಕೆ ಸಮಾಜದಿಂದ ಗೌರವ ಮತ್ತು ಸಹಕಾರ ದೊರೆಯಬೇಕು ಎಂದು ಸಚಿವರು ಹೇಳಿದರು.

# ರೈತ ಪ್ರಮೋದ ಹಳ್ಯಾಳ ಜಮೀನಿನಲ್ಲಿ ನಿರ್ಮಾಣಗೊಂಡ ಕೃಷಿಹೊಂಡದಲ್ಲಿ ಲಕ್ಷಾಂತರ ಲೀಟರ್ ನೀರು ಸಂಗ್ರಹ



ಅ.ಶ. ಸುದ್ದಿ ಕುಕನೂರು

**ಕುಕನೂರು: “ಓಡುವ ನೀರನ್ನು ನಿಲ್ಲುವಂತೆ ಮಾಡಿ, ನಿಂತ ನೀರನ್ನು ಭೂಮಿಯಲ್ಲಿ ಇಂಗಿಸುವಂತೆ ಮಾಡಿ” ಎಂಬ ಧ್ಯೇಯವಾಕ್ಯದಡಿ ಸರ್ಕಾರದ ವಿಕಸಿತ ಭಾರತ ಗ್ಯಾರಂಟಿ ರೋಜಗಾರ ಮತ್ತು ಆಜೀವಿಕ ಮಿಷನ್ (VB-GRAMG) ಯೋಜನೆಯಡಿ ಜಲ ಸಂರಕ್ಷಣಾ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುತ್ತಿದೆ. ಇದರ ಫಲವಾಗಿ ರೈತರ ಜಮೀನುಗಳಲ್ಲಿ ನಿರ್ಮಿಸಲಾಗುತ್ತಿರುವ ಕೃಷಿಹೊಂಡ, ನಾಲಾ, ಕೆರೆ, ಬದು ಹಾಗೂ ಬೋಲ್ಡರ್ ಚೆಕ್‌ಗಳಂತಹ ಕಾಮಗಾರಿಗಳು ಮಳೆನೀರನ್ನು ಸಂಗ್ರಹಿಸುವುದರ ಜೊತೆಗೆ ಅಂತರ್ಜಲ ಮಟ್ಟ ಹೆಚ್ಚಳಕ್ಕೂ ಸಹಕಾರಿಯಾಗುತ್ತಿವೆ.**

ಕುಕನೂರು ತಾಲೂಕಿನ ಇಟಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ರೈತ ಪ್ರಮೋದ ಹಳ್ಯಾಳ ಅವರ ಜಮೀನಿನಲ್ಲಿ ಗಿಃಉಖಂಒಉ ಯೋಜನೆಯಡಿ ನಿರ್ಮಿಸಲಾಗಿರುವ ಕೃಷಿಹೊಂಡದಲ್ಲಿ ಈ ಬಾರಿ ಸುರಿದ ಮಳೆಯಿಂದಾಗಿ ಲಕ್ಷಾಂತರ ಲೀಟರ್ ನೀರು ಸಂಗ್ರಹವಾಗಿದೆ. ಇದರಿಂದ ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವುದರ ಜೊತೆಗೆ ಹಸು, ಎಮ್ಮೆ, ಎತ್ತು ಸೇರಿದಂತೆ ಜಾನುವಾರುಗಳಿಗೆ ಹಾಗೂ ಪ್ರಾಣಿ-ಪಕ್ಷಿಗಳಿಗೆ ಕುಡಿಯುವ ನೀರಿನ ಆಸರೆಯಾಗಿದೆ. ಪ್ರಮೋದ ಹಳ್ಯಾಳ ಅವರು ತಮ್ಮ ಜಮೀನಿನಲ್ಲಿ ಗಿಃಉಖಂಒಉ ಯೋಜನೆಯಡಿ ಕಾಮಗಾರಿ ಕೈಗೊಳ್ಳಲು ಗ್ರಾಮ ಪಂಚಾಯತಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಧಿಕಾರಿಗಳು ಕೃಷಿಹೊಂಡ ನಿರ್ಮಿಸಿಕೊಳ್ಳುವಂತೆ ಸಲಹೆ ನೀಡಿದ್ದರು.

ಅದರಂತೆ ತಮ್ಮ ಜಮೀನಿನ ಮೂಲೆಯಲ್ಲಿ 12ಠ12ಠ3 ಮೀಟರ್ ಅಳತೆಯ ಕೃಷಿಹೊಂಡ ನಿರ್ಮಿಸಿಕೊಂಡಿದ್ದಾರೆ. ಈ ಕಾಮಗಾರಿಯಿಂದ 289 ಮಾನವ ದಿನಗಳ ಉದ್ಯೋಗ ಸೃಜನೆಯಾಗಿದ್ದು, 1.13 ಲಕ್ಷ ಕೂಲಿ ಮೊತ್ತ ವೆಚ್ಚವಾಗಿದೆ. ಈ ಹಿಂದೆ ಜಮೀನಿನಲ್ಲಿ ಬೀಳುತ್ತಿದ್ದ ಮಳೆನೀರು ಹರಿದು ಹಳ್ಳ ಸೇರುತ್ತಿತ್ತು. ಇದೀಗ ಕೃಷಿಹೊಂಡ ನಿರ್ಮಾಣದಿಂದ ಮಳೆನೀರು ಜಮೀನಿನಲ್ಲಿಯೇ ಸಂಗ್ರಹವಾಗುತ್ತಿದೆ. ಇದರಿಂದ ಮಣ್ಣಿನಲ್ಲಿ ತೇವಾಂಶ ಉಳಿಯುವುದರ ಜೊತೆಗೆ ಅಂತರ್ಜಲ ಮರುಪೂರಣಕ್ಕೂ ಅನುಕೂಲವಾಗಿದೆ. ಮಳೆ ಕೆಲ ದಿನಗಳ ಕಾಲ ಕೈಕೊಟ್ಟರೂ ಬೆಳೆಗಳಿಗೆ ತೇವಾಂಶದ ಕೊರತೆ ಕಡಿಮೆಯಾಗಿದ್ದು, ಕೃಷಿ ಚಟುವಟಿಕೆಗಳಿಗೆ ಸಹಕಾರಿಯಾಗಿದೆ.

ಕೃಷಿಹೊಂಡದಲ್ಲಿ ಸಂಗ್ರಹವಾಗಿರುವ ನೀರನ್ನು ಜಾನುವಾರುಗಳು ಸಹ ಕುಡಿಯುತ್ತಿರುವುದರಿಂದ ರೈತ ಪ್ರಮೋದ ಹಳ್ಯಾಳ ಅವರಿಗೆ ಕೃಷಿಯ ಜೊತೆಗೆ ಜಾನುವಾರುಗಳ ನೀರಿನ ಸಮಸ್ಯೆಗೂ ಪರಿಹಾರ ದೊರೆತಂತಾಗಿದೆ. ಜಲ ಸಂರಕ್ಷಣೆ ಹಾಗೂ ಉದ್ಯೋಗ ಸೃಜನೆ ಎರಡನ್ನೂ ಒಟ್ಟಿಗೆ ಸಾಧಿಸುವಲ್ಲಿ ಗಿಃಉಖಂಒಉ ಯೋಜನೆ ಪರಿಣಾಮಕಾರಿಯಾಗುತ್ತಿದೆ ಎಂಬುದಕ್ಕೆ ಈ ಕೃಷಿಹೊಂಡ ಉದಾಹರಣೆಯಾಗಿದೆ. ಅಧಿಕಾರಿಗಳ ಅಭಿಪ್ರಾಯ “ಕುಕನೂರು ತಾಲೂಕಿನಲ್ಲಿ ಗಿಃಉಖಂಒಉ ಯೋಜನೆಯಡಿ ನಾಲಾ, ಕೆರೆ, ಬದು, ಕೃಷಿಹೊಂಡ ಸೇರಿದಂತೆ ವಿವಿಧ ಜಲ ಸಂರಕ್ಷಣಾ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅಕುಶಲ ಕೂಲಿಕಾರರಿಗೆ ಉದ್ಯೋಗ ಕಲ್ಪಿಸುವುದರ ಜೊತೆಗೆ ಜಲಮೂಲಗಳ ಸಂರಕ್ಷಣೆಗೆ ಒತ್ತು ನೀಡಲಾಗುತ್ತಿದೆ. ಇಟಗಿ ಗ್ರಾಮದ ರೈತ ಪ್ರಮೋದ ಹಳ್ಯಾಳ ಅವರು ತಮ್ಮ ಜಮೀನಿನಲ್ಲಿ ಕೃಷಿಹೊಂಡ ನಿರ್ಮಿಸಿಕೊಂಡು ಅದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಅವರಂತೆ ಇತರೆ ರೈತರೂ ಸಹ ಯೋಜನೆಯ ಸದುಪಯೋಗ ಪಡೆದುಕೊಂಡು ಜಲ ಸಂರಕ್ಷಣೆಗೆ ಕೈಜೋಡಿಸಬೇಕು.”

# ಪತ್ರಿಕಾ ವರದಿಗೆ ಫಲಶ್ರುತಿ: ಲಾಯದಹುಣಸಿ ಕೆರೆಗೆ ಅಧಿಕಾರಿಗಳ ಭೇಟಿ

## ಸ್ಥಳ ಪರಿಶೀಲನೆ ನಡೆಸಿ ರೈತರ ಸಮಸ್ಯೆ ಆಲಿಸಿದ ಅಧಿಕಾರಿಗಳು

ಅ.ಶ. ಸುದ್ದಿ ಕನಕಗಿರಿ

ಅಜಾತ ಶತ್ರು ಫಲ ಶ್ರುತಿ

**ಕನಕಗಿರಿ: ಲಾಯದಹುಣಸಿ ಕೆರೆಗೆ ನೀರು ಹರಿಸುವ ವ್ಯವಸ್ಥೆಯಲ್ಲಿನ ಸಮಸ್ಯೆ ಹಾಗೂ ಪೈಪ್‌ಲೈನ್ ದುರಸ್ತಿಗೆ ಸಂಬಂಧಿಸಿದಂತೆ ಪ್ರಕಟಗೊಂಡ ಪತ್ರಿಕಾ ವರದಿಗಳಿಗೆ ಫಲಶ್ರುತಿ ದೊರೆತಿದೆ. ವರದಿಗಳನ್ನು ಗಮನಿಸಿದ ತಹಶೀಲ್ದಾರ್ ಹಾಗೂ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಲಾಯದಹುಣಸಿ ಕೆರೆಗೆ ಖುದ್ದಾಗಿ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.**



ಅಧಿಕಾರಿಗಳು ಕೆರೆಗೆ ನೀರು ಹರಿದುಬರುವ ಮಾರ್ಗ, ಪೈಪ್‌ಲೈನ್ ಅಳವಡಿಸಿರುವ ಸ್ಥಳ ಹಾಗೂ ನೀರು ಸಾಗುವ ವ್ಯವಸ್ಥೆಯನ್ನು ಪರಿಶೀಲಿಸಿದರು. ಈ ವೇಳೆ ಪೈಪ್‌ಲೈನ್‌ನಲ್ಲಿ ಉಂಟಾಗಿರುವ ಸಮಸ್ಯೆ, ನೀರು ಹರಿಯುವ ಪ್ರಮಾಣ ಮತ್ತು ಕೆರೆಗೆ ನೀರು ಸಮರ್ಪಕವಾಗಿ ತಲುಪುವಲ್ಲಿ ಎದುರಾಗುತ್ತಿರುವ ತೊಂದರೆಗಳ ಕುರಿತು ಅಧಿಕಾರಿಗಳು ಸ್ಥಳದಲ್ಲೇ ಮಾಹಿತಿ ಪಡೆದುಕೊಂಡರು.

ಸ್ಥಳದಲ್ಲಿದ್ದ ರೈತರು ಅಧಿಕಾರಿಗಳಿಗೆ ತಮ್ಮ ಸಮಸ್ಯೆಗಳನ್ನು ವಿವರಿಸಿ, ಕೆರೆಗೆ ಸಮರ್ಪಕ ಪ್ರಮಾಣದಲ್ಲಿ ನೀರು ಹರಿಯದಿರುವುದರಿಂದ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಕೆರೆಗೆ ನೀರು ಹರಿಸುವ ವ್ಯವಸ್ಥೆಯನ್ನು ತಕ್ಷಣ ಸರಿಪಡಿಸಿ, ಮುಂದಿನ ದಿನಗಳಲ್ಲಿ ಇದೇ ರೀತಿಯ ಸಮಸ್ಯೆ ಮರುಕಳಿಸದಂತೆ ಶಾಶ್ವತ ಪರಿಹಾರ ಕೈಗೊಳ್ಳಬೇಕು ಎಂದು ರೈತರು ಒತ್ತಾಯಿಸಿದರು.

ರೈತರ ಅಹವಾಲು ಆಲಿಸಿದ ಅಧಿಕಾರಿಗಳು, ಸ್ಥಳದಲ್ಲಿನ ವಾಸ್ತವ ಪರಿಸ್ಥಿತಿಯನ್ನು ಪರಿಶೀಲಿಸಿ ಸಂಬಂಧಿಸಿದ ಇಲಾಖೆಯ ಮೂಲಕ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿದರು. ಪೈಪ್‌ಲೈನ್ ಸೇರಿದಂತೆ ನೀರು ಹರಿಸುವ ವ್ಯವಸ್ಥೆಯಲ್ಲಿರುವ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸುವ ಅಗತ್ಯವನ್ನು ಅಧಿಕಾರಿಗಳು ಪರಿಶೀಲಿಸಿದರು.

“ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುವುದು ಸ್ವಾಗತಾರ್ಹ. ಆದರೆ ಪರಿಶೀಲನೆಗೆ ಮಾತ್ರ ಸೀಮಿತವಾಗದೆ, ಕೆರೆಗೆ ಸಮರ್ಪಕವಾಗಿ ನೀರು ಹರಿಯುವಂತೆ ತುರ್ತು ಕ್ರಮ ಕೈಗೊಳ್ಳಬೇಕು. ರೈತರ ಬಹುದಿನಗಳ ಬೇಡಿಕೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು” ಎಂದು ಸ್ಥಳೀಯ ರೈತರು ಆಗ್ರಹಿಸಿದರು. ಪತ್ರಿಕಾ ವರದಿಗಳ ಬಳಿಕ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿರುವುದರಿಂದ ರೈತರಲ್ಲಿ ಆಶಾಭಾವನೆ ಮೂಡಿದ್ದು, ಇದೀಗ ಸಂಬಂಧಿಸಿದ ಇಲಾಖೆಗಳು ತ್ವರಿತವಾಗಿ ಕ್ರಮ ಕೈಗೊಂಡು ಲಾಯದಹುಣಸಿ ಕೆರೆಗೆ ಸಮರ್ಪಕ ನೀರು ಹರಿಸುವ ವ್ಯವಸ್ಥೆ ಕಲ್ಪಿಸಬೇಕು ಎಂಬುದು ರೈತರ ಒತ್ತಾಯವಾಗಿದೆ.



ಅಜಾತ ಶತ್ರು
epaper.ajathashathru.com
22 Sep 2026 - Page 2

ಗೋಶಾಲೆ ಆರಂಭಿಸುವಂತೆ ಆಗ್ರಹಿಸಿ ಜಾನುವಾರುಗಳೊಂದಿಗೆ ರೈತರ ಪ್ರತಿಭಟನೆ

ಅ.ಶ. ಸುದ್ದಿ ಕನಕಗಿರಿ

# ಪ.ಪ್ರಾ.ಶಾ ಶಿಕ್ಷಕರ ಸಂಘಕ್ಕೆ ನಿರ್ದೇಶಕರಾಗಿ ಜಗದೀಶ ಕುಂಬಾರ ಅವಿರೋಧ ಆಯ್ಕೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ತಾಲೂಕು ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕ ಸ್ಥಾನಕ್ಕೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದನಕನದೊಡ್ಡಿಯ ಶಿಕ್ಷಕ ಜಗದೀಶ ಕುಂಬಾರ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.**

ಮಂಗಳವಾರ ಕೊಪ್ಪಳದಲ್ಲಿ ನಡೆದ ಸಂಘದ ಸಭೆಯಲ್ಲಿ ಈ ಆಯ್ಕೆ ನಡೆಯಿತು. ಆಯ್ಕೆಯಾದ



ಹಿನ್ನೆಲೆಯಲ್ಲಿ ದನಕನದೊಡ್ಡಿ ಶಾಲೆಯ ವತಿಯಿಂದ ಅವರಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ನಿಂಗಪ್ಪ ಕೋರಿ, ಶಿಕ್ಷಣ ಪ್ರೇಮಿ ದೊಡ್ಡಬಸವರಾಜ್, ಮುಖ್ಯಗುರು ಅಶೋಕ್, ಶಿಕ್ಷಕರಾದ ಶಶಿಧರ್, ಸತ್ಯಪ್ಪ, ಮಲ್ಲಪ್ಪ ಮೇಟಿ, ಸುಂಕಪ್ಪ, ಶಿಕ್ಷಕಿಯರಾದ ಸುಮಾ, ಚನ್ನಮ್ಮ, ಪಕೀರಮ್ಮ, ಹುಸೇನಬಿ, ಈರಮ್ಮ, ಸುಜಾತಾ, ಪಾರ್ವತಿ, ಸಾವಿತ್ರಮ್ಮ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಪಾಯದಲ್ಲಿ ಕನಕಾಚಲಪತಿ ಶ್ರೀ ಲಕ್ಷ್ಮೀನರಸಿಂಹ ದೇವಾಲಯದ ದಕ್ಷಿಣ ಗೋಪುರ

## ಕಾಳಜಿ ವಹಿಸದ ಅಧಿಕಾರಿಗಳು, ಜನಪ್ರತಿನಿಧಿಗಳು; ಭಕ್ತರಲ್ಲಿ ಆತಂಕ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವ ಹೊಂದಿರುವ ಕನಕಾಚಲಪತಿ ಶ್ರೀ ಲಕ್ಷ್ಮೀನರಸಿಂಹ ದೇವಾಲಯದ ದಕ್ಷಿಣದ ಗೋಪುರ ಇದೀಗ ಅಪಾಯದ ಸ್ಥಿತಿಯಲ್ಲಿದೆ ಎಂಬ ಆತಂಕ ವ್ಯಕ್ತವಾಗಿದೆ. ಗೋಪುರದ ರಚನೆಯಲ್ಲಿ ಹಾನಿಯ ಲಕ್ಷಣಗಳು ಕಂಡುಬರುತ್ತಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಈ ಕುರಿತು ಸೂಕ್ತ ಗಮನ ಹರಿಸಿಲ್ಲ ಎಂಬ ಆರೋಪಗಳು ಕೇಳಿಬರುತ್ತಿವೆ. ಸ್ಥಳೀಯರ ಪ್ರಕಾರ, ಗೋಪುರದ ಕೆಲವು ಭಾಗಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದು, ಗೋಡೆಗಳ ಮೇಲಿನ ಸುಣ್ಣ–ಗಾರೆ ಕಳಚಿ ಬೀಳುತ್ತಿದೆ.**

ಕೆಲವೆಡೆ ಕಲ್ಲುಗಳು ಸಡಿಲಗೊಂಡಿರುವುದು ಕಂಡುಬರುತ್ತಿದ್ದು, ಮಳೆಗಾಲದಲ್ಲಿ ನೀರು ಸೋ–ರಿಕೆಯಾಗುವ ಸಾಧ್ಯತೆಯೂ ಇದೆ ಎಂದು ಅವರು ತಿಳಿಸಿದ್ದಾರೆ. ಗೋಪುರದ ಮೇಲ್ಭಾಗದಲ್ಲಿ ಸಸ್ಯಗಳು ಬೆಳೆದಿರುವುದು ಹಾಗೂ ನಿರಂತರ ಹವಾಮಾನ ಬದಲಾವಣೆಯಿಂದ ರಚನೆ ಮತ್ತಷ್ಟು ದುರ್ಬಲವಾಗಿರಬಹುದು ಎಂಬ ಆತಂಕವೂ ವ್ಯಕ್ತವಾಗಿದೆ. ಹಾನಿಯ ನಿಖರ ಸ್ವರೂಪ ಮತ್ತು ವ್ಯಾಪ್ತಿ ತಜ್ಞರ ಪರಿಶೀಲನೆಯ ನಂತರವೇ ಸ್ಪಷ್ಟವಾಗಬೇಕಿದೆ. ದೇವಾಲಯಕ್ಕೆ ಪ್ರತಿನಿತ್ಯ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಗೋಪುರದ ಸುರಕ್ಷತೆ ಕುರಿತು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ. ಗೋಪುರದ ಸ್ಥಿತಿಯನ್ನು ತಜ್ಞರಿಂದ ಪರಿಶೀಲಿಸಿ, ಅಗತ್ಯ ದುರಸ್ತಿ ಹಾಗೂ ಸಂರಕ್ಷಣಾ ಕಾಮಗಾ–ರಿಗಳನ್ನು ತಕ್ಷಣ ಕೈಗೊಳ್ಳಬೇಕು ಎಂದು ಭಕ್ತರು ಹಾಗೂ ಸ್ಥಳೀಯರು ಒತ್ತಾಯಿಸಿದ್ದಾರೆ.

"ಹಲವು ದಿನಗಳಿಂದ ಗೋಪುರದ ಗೋಡೆಗಳಲ್ಲಿ ಬಿರುಕುಗಳು ಕಾಣಿಸುತ್ತಿವೆ. ಕಲ್ಲುಗಳು ಅಥವಾ ಗಾರೆ ಕುಸಿದು ಬೀಳುವ ಭಯದಿಂದ ಭಕ್ತರು ಆತಂಕದಿಂದ ದೇವಾಲಯಕ್ಕೆ ಬರುತ್ತಿದ್ದಾರೆ. ಅಧಿಕಾರಿಗಳಿಗೆ ಹಲವು ಬಾರಿ ಮಾಹಿತಿ ನೀಡಿದರೂ ಶಾಶ್ವತ ಪರಿಹಾರ ಕೈಗೊಂಡಿಲ್ಲ," ಎಂದು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ. ದೇವಾಲಯದ ಐತಿಹಾಸಿಕ ಸ್ವರೂಪಕ್ಕೆ ಧಕ್ಕೆಯಾಗದಂತೆ ವೈಜ್ಞಾನಿಕ ವಿಧಾನದಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಬೇಕು ಎಂಬುದು ಅವರ ಆಗ್ರಹವಾಗಿದೆ.



ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಗೋಪುರದ ಪ್ರಸ್ತುತ ಸ್ಥಿತಿಯ ಕುರಿತು ವರದಿ ಸಿದ್ಧಪಡಿಸಬೇಕು. ಪುರಾತತ್ವ, ದೇವಾಲಯ ಸಂರಕ್ಷಣೆ ಹಾಗೂ ರಚನಾ ಇಂಜಿನಿಯರಿಂಗ್ ಕ್ಷೇತ್ರದ ತಜ್ಞರನ್ನು ಒಳಗೊಂಡ ಸಮಿತಿಯಿಂದ ಗೋಪುರದ ಸಂಪೂರ್ಣ ಪರಿಶೀಲನೆ ನಡೆಸುವುದು ಅಗತ್ಯವಾಗಿದೆ. ಬಿರುಕುಗಳ ಆಳ, ಅಡಿಪಾಯದ ಸ್ಥಿರತೆ, ಕಲ್ಲು–ಗಾರೆಗಳ ಬಲ, ನೀರು ನುಗ್ಗುವಿಕೆ ಹಾಗೂ ಮೇಲ್ಭಾಗದ ಭಾರವಿನ್ಯಾಸವನ್ನು ವೈಜ್ಞಾನಿಕವಾಗಿ ಪರಿಶೀಲಿಸಬೇಕು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.



ಗೋಪುರದ ಮೇಲೆ ತಕ್ಷಣದ ಅಪಾಯವಿದ್ದರೆ ತಾತ್ಕಾಲಿಕ ಬೆಂಬಲ ವ್ಯವಸ್ಥೆ ಕಲ್ಪಿಸಿ, ಹಾನಿಗೊಳಗಾದ ಭಾಗಗಳನ್ನು ಸುರಕ್ಷಿತವಾಗಿ ತೆರವುಗೊಳಿಸಬೇಕು. ನಂತರ ಪರಂಪರ ವಸ್ತುಗಳು ಮತ್ತು ಸಂರಕ್ಷಣಾ ಮಾನದಂಡಗಳನ್ನು ಅನುಸರಿಸಿ ದುರಸ್ತಿ ಹಾಗೂ ಬಲವರ್ಧನೆ ಕಾಮಗಾರಿಗಳನ್ನು ಕೈಗೊಳ್ಳಬೇಕು. ಯಾವುದೇ ಕಾಮಗಾರಿಗೂ ಮುನ್ನ ತಜ್ಞರ ಸಲಹೆ ಮತ್ತು ಸಂಬಂಧಪಟ್ಟ ಸಂರಕ್ಷಣಾ ಇಲಾಖೆಗಳ ಅನುಮತಿ ಪಡೆಯಬೇಕು. ಐತಿಹಾಸಿಕ ದೇವಾಲಯದ ಸುರಕ್ಷತೆ ಹಾಗೂ ಸಂರಕ್ಷಣೆಗೆ ಸಂಬಂಧಪಟ್ಟ ಇಲಾಖೆಗಳು ಕೂಡಲೇ ಕ್ರಮ ಕೈಗೊಂಡು, ಯಾವುದೇ ಅನಾಹುತ ಸಂಭವಿಸುವ ಮುನ್ನ ಸಮಸ್ಯೆಯನ್ನು ಪರಿಹರಿಸಬೇಕು, ಅಹಿತಕರ ಘಟನೆ ನಡೆದರೆ,! ಅದಕ್ಕೆ ಅಧಿಕಾರಿಗಳು ಮತ್ತು ಸರಕಾರ ನೇರ ಹೊಣೆ ವಹಿಸಬೇಕಾಗುತ್ತೆ..

● ದುರ್ಗಾದಾಸ್ ಯಾದವ್ ಕನಕಗಿರಿ, ಹಿರಿಯ ಮುಖಂಡರು ಹಾಗೂ ಸಾಮಾಜಿಕ ಹೋರಾಟಗಾರರು



ಕನಕಗಿರಿಯ ಶ್ರೀ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ದಕ್ಷಿಣ ಗೋಪುರದ ಚಾವಣಿಯ ಒಂದು ಭಾಗ ಸ್ವಲ್ಪ ಕುಸಿದಿರುವುದು ಗಮನಕ್ಕೆ ಬಂದಿದೆ. ಈ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತಂದು, ಅಗತ್ಯ ಪರಿಶೀಲನೆ ನಡೆಸಿ ಶೀಘ್ರದಲ್ಲೇ ದುರಸ್ತಿ ಕಾರ್ಯ ಕೈಗೊಳ್ಳಲು ಕ್ರಮ ವಹಿಸಲಾಗುವುದು..

● ಚಂದ್ರಶೇಖರ್ ಶಂಬಣ್ಣ ಗಾಳಿ, ತಹಶೀಲ್ದಾರ್ ಹಾಗೂ ಆಡಳಿತ ಅಧಿಕಾರಿಗಳು,ಕನಕಗಿರಿ..

---

## ಮೈಸೂರು ಮೃಗಾಲಯ ಸೇರಿದ ತಾಯಿಯಿಂದ ಬೇರ್ಪಟ್ಟಿದ್ದ ಮರಿ ಆನೆ

ಅ.ಶ. ಸುದ್ದಿ ಹನೂರು

**ಹನೂರು: ತಾಲ್ಲೂಕಿನ ಮಲೆ ಮಹದೇಶ್ವರ ವನ್ಯಧಾಮದಲ್ಲಿ ತಾಯಿಯಿಂದ ಬೇರ್ಪಟ್ಟಿದ್ದ ಮರಿಯಾನೆಯನ್ನು ಮೈಸೂರಿನ ಚಾಮರಾಜೇಂದ್ರ ಮಗಾಲಯಕ್ಕೆ ಬಿಡಲಾಯಿತು. ಹನೂರು ಬಫರ್ ವಲಯದ ಅರಕನ ಹಳ್ಳದ ಬಳಿ ಮರಿಯಾನೆ ತಾಯಿಗಾಗಿ ಕಾಡಿನಲ್ಲಿ ಹುಡುಕಾಟ ನಡೆಸಿತ್ತು.**



ಅಜ್ಜಿಪುರ ರಸ್ತೆಯಲ್ಲಿ ಓಡಾಡುತ್ತಿದ್ದ ಮರಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಹಿಂಬಾಲಿಸಿ ರಾತ್ರಿಯಿಡೀ ಗಮನಿಸಿದ್ದರು. ಆದ–'ರೆ ತಾಯಿ ಆನೆ ಬರದಿದ್ದರಿಂದ ಮರಿಯನ್ನು ಕರೆತಂದು ನರ್ಸ–ರಿಯಲ್ಲಿ ಆರೈಕೆ ಮಾಡಿ ಬಳಿಕ ಮೈಸೂರಿನ ಮಗಾಲಯಕ್ಕೆ ಬಿಟ್ಟರು. ಇದು ಅಂದಾಜು ಒಂದು ತಿಂಗಳ ಮರಿಯಾಗಿದ್ದು, ಸ್ವಲ್ಪ ಬಳಲಿದಂತೆ ಕಾಣುತ್ತಿದೆ. ನಮಲ್ಲಿ ಅದಕ್ಕೆ ಸಮರ್ಪಕ ಆರೈಕೆ ವ್ಯವಸ್ಥೆ ಇಲ್ಲದ ಕಾರಣ ಮಗಾಲಯಕ್ಕೆ ಬಿಡಲಾಗಿದೆ. ಅಲ್ಲಿ ಸೂಕ್ತ ಆರೈಕೆ ದೊರೆಲಿದೆ ಎಂದು ಮಲೆಮಹದೇಶ್ವರ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿರಾಜ್ ಹೊಸೂರು ತಿಳಿಸಿದರು.

---

## ಸುದರ್ಶನ ಕ್ರಿಯೆಯಿಂದ ಮಾನಸಿಕ ನೆಮ್ಮದಿ ಸಾಧಿಸಲು ಸಾಧ್ಯ: ಡಾ. ಬಿ.ಎಂ. ಪಾಟೀಲ್ ಗುರೂಜಿ.

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ವಿಜಯಪುರ ಜಿಲ್ಲೆಯಲ್ಲಿ ಆರ್ಟ್ ಆಫ್ ಲಿವಿಂಗ್ ನ ಕಾರ್ಯಕ್ರಮಗಳನ್ನು ಆರಂಭಿಸಿ ಯಶಸ್ವಿ ಎರಡು ವರ್ಷ ಪೂರೈಸಿ ಮೂರನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ ಇದನ್ನು ಮುನ್ನಡೆಸಿದ ಡಾ. ಬಿ.ಎಂ ಪಾಟೀಲ್ ಗುರೂಜಿಯವರನ್ನು ಆರ್ಟ್ ಆಫ್ ಲಿವಿಂಗ್ ಬಳಗದ ವತಿಯಿಂದ ನಗರದ ಸಾಯಿ ಪರ್ಕ್ ಬಡಾವಣೆಯ ಏಳು ಮಕ್ಕಳ ತಾಯಿ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸತ್ಕರಿಸಲಾಯಿತು.**

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಬಿ. ಎಂ. ಪಾಟೀಲ್ ಗುರೂಜಿ ಆರೋಗ್ಯದ ಮಹತ್ವವನ್ನು ವಿವ–ರಿಸುತ್ತಾ, ಸುದರ್ಶನ ಕ್ರಿಯೆಯ ನಿಯಮಿತ ಅಭ್ಯಾಸದ ಮೂಲಕ ಒತ್ತಡವನ್ನು ಕಡಿಮೆ ಮಾಡಿಕೊಂಡು, ಮನಸ್ಸಿನಲ್ಲಿ ಶಾಂತಿ, ನೆಮ್ಮದಿ



ಹಾಗೂ ಸಕಾರಾತ್ಮಕ ಚಿಂತನೆ ಬೆಳೆಸಿಕೊಳ್ಳಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಮಾನಸಿಕ ಆರೋಗ್ಯದ ಜೊತೆಗೆ ದೈಹಿಕ ಆರೋಗ್ಯಕ್ಕೂ ಯೋಗ, ಧ್ಯಾನ ಹಾಗೂ ಪ್ರಾಣಾಯಾಮಗಳು ಸಹಾಯಕವಾಗಿವೆ.

ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಇಂತಹ ಅಭ್ಯಾಸಗಳನ್ನು ಅಳವಡಿಸಿಕೊಂಡು ಸಂತೋಷ ಹಾಗೂ ನೆಮ್ಮದಿಯ ಜೀವನ ನಡೆಸಬೇಕು ಎಂದು ಅವರು ಕರೆ ನೀಡಿದರು. ಇದೇ ಸಂದರ್ಭದಲ್ಲಿ ಬ್ರಹ್ಮಕುಮಾರಿ ರಾಜಯೋಗಿನಿ ಸುವರ್ಣ ಅಕ್ಕನವರು ನಶೆ ಮುಕ್ತ ಅಭಿಯಾನದ ಪ್ರತಿಜ್ಞೆ ವಿಧಿ ಬೋಧಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಭಿವೃದ್ಧಿ ಸಮಿತಿಯ ಸದಸ್ಯರಾದ ಡಾ. ರವೀಂದ್ರ ಬೆಳ್ಳಿ, ಗೀತಾ ದೇಸಾಯಿ, ಮಹಾದೇವಯ್ಯ ಗಚ್ಚಿನಮಠ, ಎನ್. ಡಿ .ಮಸೂತಿ, ಪ್ರಕಾಶ ಚವ್ಹಾಣ, ಚಂದ್ರಶೇಖರ ಸಿಂಧೂರ, ಯೋಗ ಶಿಕ್ಷಕಿ ಸಹನಾ ಪಾಟೀಲ್, ಬಸಲಿಂಗಮ್ಮ ಮಸೂತಿ, ಮಹಾನಂದಾ ಬಿರಾದಾರ, ಜ್ಯೋತಿ ಪಾಟೀಲ, ಸವಿತಾ ಕಟ್ಟಿ, ಮಹಾದೇವಿ ಬಿರಾದಾರ, ಲಕ್ಷ್ಮೀಬಾಯಿ,ಜಗದೀಶ್ ಹಲ್ಯಾಳ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

---

## ಶ್ರೀ ಕನಕಚಲಪತಿ ದೇವಸ್ಥಾನದ ಹುಂಡಿ ಎಣಿಕೆ: 9.30ಲಕ್ಷ ಸಂಗ್ರಹ

ಅ.ಶ. ಸುದ್ದಿ ಕನಕಗಿರಿ



**ಕನಕಗಿರಿ: ಪಟ್ಟಣದ ಶ್ರೀ ಕನಕಚಲಪತಿ ದೇವಸ್ಥಾನದ ಹುಂಡಿ ಎಣಿಕೆ ಕಾರ್ಯವನ್ನು ಬುಧವಾರ ಮಾನ್ಯ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.**

ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಭಕ್ತರು ಹುಂಡಿಗೆ ಸಮರ್ಪಿಸಿದ ಕಾಣಿಕೆಗಳನ್ನು ಎಣಿಕೆ ಮಾಡಲಾಗಿದ್ದು, ಒಟ್ಟು ?9,30,470 ಹಣ ಸಂಗ್ರಹವಾಗಿದೆ. ಹುಂಡಿ ಎಣಿಕೆ ಕಾರ್ಯದಲ್ಲಿ, ದೇವಸ್ಥಾನದ ಆಡಳಿತ ಮಂಡಳಿಸಿಬ್ಬಂದಿಗಳು, ಕಂದಾಯ ಇಲಾಖೆ, ತಾಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿ ಉಪಸ್ಥಿತ–ರಿದ್ದು, ಎಣಿಕೆ ಕಾರ್ಯವನ್ನು ಕ್ರಮಬದ್ಧವಾಗಿ ನಡೆಸಿದರು.

---

## 15 ದಿನದೊಳಗೆ ಗಣೇಶ ಮೂರ್ತಿ ವಿಸರ್ಜಿಸಿ: DYSP ಜಯಪ್ಪ ನ್ಯಾಮನಗೌಡ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಪಟ್ಟಣ ಹಾಗೂ ಗ್ರಾಮೀಣ ಭಾಗಗಳಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗಳನ್ನು 15 ದಿನಗಳೊಳಗಾಗಿ ಕಡ್ಡಾಯವಾಗಿ ವಿಸರ್ಜನೆ ಮಾಡಬೇಕು ಎಂದು ಆಜಖಕ ಜಯಪ್ಪ ನ್ಯಾಮನಗೌಡ ಸೂಚಿಸಿದರು.**

ಗಣೇಶೋತ್ಸವದ ಹಿನ್ನೆಲೆಯಲ್ಲಿ ವಿವಿಧ ಗಣೇಶ ಮಂಡಳಿಗಳ ವತಿಯಿಂದ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದ್ದು, ಸಾರ್ವಜನಿಕರು ಹಾಗೂ ಭಕ್ತರು ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಗಣೇಶೋತ್ಸವ ಶಾಂತಿಯುತವಾಗಿ ಹಾಗೂ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ನಡೆಯಲು ಪೊಲೀಸ್ ಇಲಾಖೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಅವರು ತಿಳಿಸಿದರು. ಗಣೇಶ ಮೂರ್ತಿ ಪ್ರತಿಷ್ಠಾಪಿಸಿರುವ ಮಂಡಳಿಗಳು ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಆಡಳಿತದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. .ಗಣೇಶ ವಿಸರ್ಜನೆಗೆ



ನಿಗದಿಪಡಿಸಿರುವ ಅವಧಿಯನ್ನು ಮೀರಿಸದೆ 15 ದಿನದೊಳಗೆ ವಿಸರ್ಜನಾ ಕಾರ್ಯಕ್ರಮ ಪೂರ್ಣಗೊಳಿಸಬೇಕು ಎಂದು ಆಜಖಕ ಸೂಚಿಸಿದರು. ವಿಸರ್ಜನಾ ಮೆರವಣಿಗೆ ಸಂದರ್ಭದಲ್ಲಿ ಧ್ವನಿವರ್ಧಕಗಳ ಬಳಕೆ, ವಾಹನ ಸಂಚಾರ ಹಾಗೂ ಸಾರ್ವಜನಿಕ–ರಿಗೆ ಆಗುವ ತೊಂದರೆಗಳ ಬಗ್ಗೆ ಮಂಡಳಿಗಳು ವಿಶೇಷ ಗಮನಹರಿಸಬೇಕು.

ಮೆರವಣಿಗೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ, ಗಲಾಟೆ ಅಥ–'ವಾ ಕಾನೂನು ಉಲ್ಲಂಘನೆ ನಡೆಯದಂತೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು. ಅದೇ ರೀತಿ ಗಣೇಶ ಮೂರ್ತಿಗಳ ವಿಸರ್ಜನೆ ಸಂದರ್ಭದಲ್ಲಿ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು. ಸಾರ್ವಜನಿಕರು ಹಾಗೂ ಗಣೇಶೋತ್ಸವ ಆಯೋಜ–ಕರು ಪೊಲೀಸ್ ಇಲಾಖೆ ಮತ್ತು ಸ್ಥಳೀಯ ಆಡಳಿತದೊಂದಿಗೆ ಸಹಕರಿಸುವ ಮೂಲಕ ಗಣೇಶೋತ್ಸವವನ್ನು ಶಾಂತಿಯುತವಾಗಿ ಹಾಗೂ ಸೌಹಾರ್ದಯುತವಾಗಿ ಆಚರಿಸಬೇಕು



ಎಂದು ಜಯಪ್ಪ ನ್ಯಾಮನಗೌಡ ಹೇಳಿದರು.

ಗಣೇಶೋತ್ಸವದ ಹೆಸರಿನಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಯಾವುದೇ ಚಟುವಟಿಕೆಗಳಿಗೆ ಅವಕಾಶ ನೀಡಲಾಗುವುದಿಲ್ಲ. ಸಾರ್ವಜನಿಕರು ಯಾವುದೇ ಸಮಸ್ಯೆ ಕಂಡುಬಂದಲ್ಲಿ ತಕ್ಷಣ ಪೊಲೀಸ್ ಇಲಾಖೆಯ ಗಮನಕ್ಕೆ ತಂದು ಸಹಕರಿಸಬೇಕು ಎಂದು ಅವರು ತಿಳಿಸಿದರು. ಗಣೇಶೋತ್ಸವದ ಸಂದರ್ಭದಲ್ಲಿ ಭಕ್ತಿ, ಶಿಸ್ತು ಹಾಗೂ ಸೌಹಾರ್ದತೆ ಕಾಪಾಡಿಕೊಂಡು ಹಬ್ಬವನ್ನು ಆಚರಿಸುವಂತೆ ಪೊಲೀಸ್ ಇಲಾಖೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

---

### 'ವಚನಾಮೃತ'

ಸೂಳೆಯಂಬೊಳ್ ಆದಳೆ ಬಯಸಿ
ತಾ ಮಲೀನಮಂಚಕೆ ಓಡೋಡಿ ತಾ
ಕುಣಿದು!. ಬೇಡದ ಪಡೆದ ಶಾಪಕ್ಕೆ
ಬಾಡಿ ಹೋಹುದ ಕಂಡು
ಜೇಡರಬಲೆಯಂತೆ ಮೈಮನ
ಸತ್ಯವಾಣಿ!!.



ವಾಣಿ ಭಂಡಾರಿ.

---

## ಕೆಎಸ್ಒಯು ನಲ್ಲಿ ಏಕಕಾಲಕ್ಕೆ ಎರಡು ಪದವಿಗಳನ್ನು ಪಡೆಯಲು ಅವಕಾಶವಿದೆ : ವಿ. ಸಿ ಜ್ಞಾನ ಪ್ರಕಾಶ್

ಅ.ಶ. ಸುದ್ದಿ ಬಳ್ಳಾರಿ

**ಬಳ್ಳಾರಿ: ನಗರದ ನಲಚರವು ಪ್ರದೇಶದಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ದೂರ ಶಿಕ್ಷಣ ತರಗತಿಗಳಿಗೆ ಪ್ರವೇಶವನ್ನು ಸೆಪ್ಟೆಂಬರ್ 31ರವರೆಗೆ ಪಡೆದುಕೊಳ್ಳಬಹುದು ಎಂದು ವಿಶ್ವವಿದ್ಯಾಲಯದ ಕುಲಪತಿ ಜ್ಞಾನ ಪ್ರಕಾಶ್ ತಿಳಿಸಿದರು.**

ಈ ಕುರಿತು ಅವರು ಇಂದು ಪತ್ರಿಕಾ ಭವನದಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿ, ರಾಜ್ಯದಲ್ಲಿ ದೂರ ಶಿಕ್ಷಣ ನೀಡುವ ಏಕೈಕ ವಿಶ್ವವಿದ್ಯಾಲಯ ಕೆಎಸ್ಒಯು ಆಗಿದೆ ನಮ್ಮ ವಿಶ್ವವಿದ್ಯಾಲಯದಲ್ಲಿ ಉದ್ಯೋಗಸ್ಥರು ಕಾಲೇಜುಗಳಿಗೆ ರೆಗ್ಯುಲರ್ ಆಗಿ ಹಾಜರಾಗಲು ಸಾಧ್ಯವಾಗದವರು ಮಹಿಳೆಯರು ಸೇರಿದಂತೆ ಎಲ್ಲರೂ ಬಿಕಾಂ ಬಿಎ ಸೇರಿದಂತೆ ವಿವಿಧ ರೀತಿಯ ಪದವಿಗಳು ಮತ್ತು ಸ್ನಾತಕೋತ್ತರ




ಪದವಿಗಳನ್ನು ಪಡೆದುಕೊಳ್ಳಬಹುದು,

ಎಲ್ಲರಿಗೂ ಎಲ್ಲಾ ಕಡೆ ಉನ್ನತ ಶಿಕ್ಷಣ ಎಂಬ ಧ್ಯೇಯ ವಾಕ್ಯದೊಂದಿಗೆ ರಾಜ್ಯದಲ್ಲಿ ಸುಮಾರು 38 ಪ್ರಾದೇಶಿಕ ಕೇಂದ್ರಗಳಿದ್ದು 75 ಪರೀಕ್ಷಾ ಕೇಂದ್ರಗಳಿವೆ ಆನ್ಲೈನ್ ಮೂಲಕ ಎಲ್ಲಿಂದಲಾದರೂ ಪ್ರವೇಶವನ್ನು ಪಡೆದು ಪದವಿಗಳನ್ನು ಪಡೆಯಬಹುದು ಮತ್ತು ನಮ್ಮ ವಿಶ್ವವಿದ್ಯಾಲಯದಲ್ಲಿ ಆನ್ಲೈನ್ ತರಗತಿಗಳನ್ನು ಸಹ ಆರಂಭಿಸಲಾಗಿದೆ ಅಷ್ಟೇ ಅಲ್ಲದೆ ಪ್ರತ್ಯೇಕವಾದ ಯುಟ್ಯೂಬ್ ಹೊಂದಿರುವ ನಮ್ಮ ವಿವಿಯ ಎಲ್ಲಾ ಪಠ್ಯಕ್ರಮಗಳನ್ನು ಪಡೆದುಕೊಂಡು ಪರೀಕ್ಷೆ ತಯಾರಿಯನ್ನು ನಡೆಸಬಹುದಾಗಿದೆ ಅದಕ್ಕಿಂತ ಮುಖ್ಯವಾಗಿ ಸಕಾಲದಲ್ಲಿ ಮತ್ತು ಅತ್ಯಂತ ಉಪಯುಕ್ತವಾದ ಪಠ್ಯಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುವುದು ಇದರಿಂದ ಉನ್ನತ ಗುಣಮಟ್ಟದ ವಿದ್ಯೆಯನ್ನು ಪಡೆದುಕೊಳ್ಳಬಹುದು ನಮ್ಮಲ್ಲಿ ಪಡೆಯುವ ಪದವಿಗಳು ಎಲ್ಲಾ ರೆಗುಲರ್ ಕಾಲೇಜುಗಳ ಪದವಿಗೆ ಸಮಾನವಾಗಿರುತ್ತದೆ ಖಾಸಗಿ ಮತ್ತು ಸರ್ಕಾರಿ ಹುದ್ದೆ ಪಡೆಯಲು ಸಹ ನಮ್ಮ ಪದವಿಗಳು ಅರ್ಹವಾಗಿರುತ್ತವೆ ನಮ್ಮಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳು ಕೆಎಎಸ್ ಮತ್ತು ಐಎಎಸ್ ಸೇರಿದಂತೆ ಹಲವಾರು ಉನ್ನತ ಹುದ್ದೆಗಳನ್ನು ಪಡೆದುಕೊಂಡಿದ್ದಾರೆ ಎಂದರು.

ನ್ಯಾಕ್ ಮಾನ್ಯತೆ ಹೊಂದಿರುವ ನಮ್ಮ ವಿಶ್ವವಿದ್ಯಾಲಯದಲ್ಲಿ ರಾಜ್ಯ ಮತ್ತು ಹೊರರಾಜ್ಯದಲ್ಲಿ 12800 ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಂಡಿದ್ದಾರೆ ಇದರಿಂದ ನಮ್ಮ ವಿಶ್ವವಿದ್ಯಾಲಯ ದೂರ ಶಿಕ್ಷಣ ನೀಡುವಲ್ಲಿ ಇಡೀ ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ, ಬಳ್ಳಾರಿ ಕೇಂದ್ರವನ್ನು ಉತ್ತರ ಕರ್ನಾಟಕದ ನೋಡಲ್ ಕೇಂದ್ರವನ್ನಾಗಿ ಮಾಡಲಾಗುವುದು ಎಂದರು. ದಾರಿಯ ಯಾವುದಯ್ಯ ಕೆಎಸ್ಒಯುಗೆ ನಲ್ಲ ಚರವು ಪ್ರದೇಶದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸುಸಜ್ಜಿತವಾದ ಉತ್ತಮ ಸೌಲಭ್ಯಗಳ ಕಟ್ಟಡವಿದ್ದು ಈ ಕೇಂದ್ರಕ್ಕೆ ಹೋಗಿ ಬರಲು ರಸ್ತೆಯ ಅನಾನುಕೂಲವಿದ್ದು ಯುವ ಸಬಲೀಕರಣ ಇಲಾಖೆಯವರು ಆ ರಸ್ತೆಯನ್ನು ಬಂದ್ ಮಾಡುತ್ತಾರೆ ಎನ್ನುವುದು ತಿಳಿದು ಬಂದಿದೆ, ಇದರಿಂದಾಗಿ ವಿದ್ಯಾರ್ಥಿಗಳಿಗೆ ಕೇಂದ್ರಕ್ಕೆ ಹೋಗಿ ಬರಲು ಸಮಸ್ಯೆ ಆಗಿರುತ್ತದೆ ದಯವಿಟ್ಟು ಜಿಲ್ಲಾಧಿಕಾರಿಗಳು ಕೆ ಎಸ್ ಓ ಯು ಗೆ ಹೋಗಿ ಬರಲು ರಸ್ತೆಯ ಸಮಸ್ಯೆಯನ್ನು ಪರಿಹರಿಸಿ ಕೊಡಬೇಕೆಂದು ಜ್ಞಾನಪ್ರಕಾಶ್ ಮನವಿ ಮಾಡಿದರು.

ಈ ಪತ್ರಿಕಾಗೋಷ್ಠಿಯಲ್ಲಿ ಡಾಕ್ಟರ್ ಎನ್ ಆನಂದ ಗೌಡ ಅರುಣ್ ಸುರೇಶ್ ಮೈತ್ರಿ ಸೇರಿದಂತೆ ಇತರರಿದ್ದರು.

# ಲೇಖಕರ ದಿನಚರಿ...

## ಭಾರತಕ್ಕೆ ಕಾಫಿ ಕೃಷಿ ಪರಿಚಯಿಸಿದ "ರಾಬರ್ಟ್ ಹೆನ್ರಿ ಎಲಿಯಟ್"

1855ರಲ್ಲಿ ಸ್ಕಾಟ್ಲೆಂಡ್‌ನ 18 ವರ್ಷದ ಸಾಹಸಿ ಯುವಕ "ರಾಬರ್ಟ್ ಹೆನ್ರಿ ಎಲಿಯಟ್", ಕಾಫಿ ಕೃಷಿಯಲ್ಲಿ ಅದೃಷ್ಟ ಪರೀಕ್ಷಿಸುವ ಉದ್ದೇಶದಿಂದ ಏಕಾಂಗಿಯಾಗಿ ಸುಮಾರು 21 ಸಾವಿರ ಕಿ.ಮೀ. ಗಳಷ್ಟು ದೂರದಲ್ಲಿದ್ದ ಭಾರತದ ಸಕಲೇಶಪುರದತ್ತ ಹಡಗಿನಲ್ಲಿ ಪ್ರಯಾಣ ಬೆಳೆಸಿದನು.!

ಮೂರ್ನಾಲ್ಕು ತಿಂಗಳ ಸುದೀರ್ಘ ಸಮುದ್ರ ಪ್ರಯಾಣದ ನಂತರ ಬಾಂಬೆ ತೀರಕ್ಕೆ ಬಂದಿಳಿದ ಎಲಿಯಟ್, ಅಲ್ಲಿಂದ ಉಪ್ಪು ಸಾಗಿಸುವ ಪುಟ್ಟ ದೋಣಿಯೊಂದನ್ನು ಏರಿ ಮಂಗಳೂರನ್ನು ತಲುಪಿದನು. ನಂತರ ಅಲ್ಲಿಂದ ಕಾಲ್ನಡಿಗೆ ಮತ್ತು ಎತ್ತಿನ ಗಾಡಿಗಳ ಮೂಲಕ ಕಡಿದಾದ ಪಶ್ಚಿಮ ಘಟ್ಟಗಳನ್ನು ಹತ್ತಿ, ತಾನು ತರಬೇತಿ ಪಡೆಯಲು ಬಯಸಿದ್ದ ಸಕಲೇಶಪುರದ ಬ್ರಿಟೀಷ್ ಪ್ಲ್ಯಾಂಟರ್ ಫ್ರೆಡೆರಿಕ್ ಗ್ರೀನ್ ಅವರ ಕಾಫಿ ಎಸ್ಟೇಟ್ ಪ್ರವೇಶಿಸಿದನು.!

1831 ರಲ್ಲಿ ಬ್ರಿಟಿಷ್ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್, ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಂದ ಅಧಿಕಾರವನ್ನು ಕಸಿದುಕೊಂಡು ಮೈಸೂರನ್ನು ನೇರವಾಗಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತಕ್ಕೆ ಒಳಪಡಿಸಿದ ನಂತರ ನಡೆದ ಬೆಳವಣಿಗೆಗಳ ಫಲವಾಗಿ ಸರ್ ಮಾರ್ಕ್ ಕಬ್ಬನ್ ಅವರು 1834 ರಲ್ಲಿ ಮೈಸೂರಿನ ಮುಖ್ಯ ಕಮಿಷನರ್ ಆಗಿ ನೇಮಕಗೊಂಡರು.

ಕಬ್ಬನ್ ರವರು ಅಧಿಕಾರಕ್ಕೆ ಬರುವ ಮುನ್ನ ಬಾಬಾಬುಡನ್ ಗಿರಿಯ ಸುತ್ತಮುತ್ತ ಸ್ಥಳೀಯರು ತಮ್ಮ ಮನೆಗಳ ಹಿತ್ತಲಿನಲ್ಲಿ, ತೋಟದ ಬದಿಗಳಲ್ಲಿ ಅಥವಾ ಸಣ್ಣ ಗುಂಪುಗಳಲ್ಲಿ ಕಾಫಿ ಗಿಡಗಳನ್ನು ಬೆಳೆಸುತ್ತಿದ್ದರು. ಇದನ್ನು "ಸ್ಥಳೀಯ ತೋಟಗಳು" ಎನ್ನಲಾಗುತ್ತಿತ್ತೇ ಹೊರತು ಇಂತಿಷ್ಟು ಎಕರೆ ಎಂಬ ವ್ಯವಸ್ಥಿತ ವಿಸ್ತೀರ್ಣದ ದಾಖಲೆಗಳು ಇರಲಿಲ್ಲ.

ಅಲ್ಲದೇ, ಹತ್ತು ವರ್ಷಗಳ ಹಿಂದೆ 1823 ರಲ್ಲಿ ಮೈಸೂರು ಸಂಸ್ಥಾನದಾದ್ಯಂತ ಬೆಳೆಯುವ ಕಾಫಿಯ ಖರೀದಿ ಮತ್ತು ರಫ್ತಿನ ಸಂಪೂರ್ಣ ಏಕಸ್ವಾಮ್ಯದ ಹಕ್ಕನ್ನು 'ಪ್ಯಾರಿ ಕಂಪನಿ'ಯ ಜೆ.ಎಚ್. ಜಾಲಿ ಎಂಬ ಬ್ರಿಟಿಷ್ ವ್ಯಾಪಾರಿಗೆ ಮೈಸೂರು ಮಹಾರಾಜರು ಗುತ್ತಿಗೆ ನೀಡಿದ್ದರು. ಇದರಿಂದಾಗಿ, ಸಾಮಾನ್ಯ ಜನರಿಗೆ ಸ್ವತಂತ್ರವಾಗಿ ಕಾಫಿ ತೋಟಗಳನ್ನು ಆರಂಭಿಸಲು ಅಥವಾ ವಿಸ್ತರಿಸಲು ಯಾವುದೇ ಪ್ರೋತ್ಸಾಹ ಸಿಗುತ್ತಿರಲಿಲ್ಲ.

ಮಾರ್ಕ್ ಕಬ್ಬನ್ ಅವರು ಹಳೆಯ ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ, ಕಾಫಿ ಕೃಷಿ ಮತ್ತು ವ್ಯಾಪಾರವನ್ನು ಮುಕ್ತ ಮಾರುಕಟ್ಟೆಗೆ ತಂದರು. ದಟ್ಟ ಕಾಡುಗಳಲ್ಲಿ ತೋಟಗಳನ್ನು ಅಳೆಯುವುದು ಕಷ್ಟವಾಗಿದ್ದರಿಂದ, ವಿಸ್ತೀರ್ಣದ ಬದಲಿಗೆ ಕಾಫಿಯ ತೂಕದ ಆಧಾರದ ಮೇಲೆ ಬೆಳೆಗಾರರಿಗೆ ಹೊರೆಯಾಗದ ಸಾಧಾರಣ 'ಹಲಾತ್' ಸುಂಕವನ್ನು ನಿಗದಿಪಡಿಸಿದರು. ಇದರಿಂದಾಗಿ




ಕಾಫಿ ಕಳ್ಳಸಾಗಣೆ ತಡೆಗಟ್ಟಲ್ಪಟ್ಟು, ಸಣ್ಣ ರೈತರಿಗೂ ತೆರಿಗೆಯ ಹೊರೆ ತಗ್ಗಿತು.

ಕಬ್ಬನ್ ಅವರ ಈ ಪ್ರಗತಿಪರ ತೆರಿಗೆ ನೀತಿಯಿಂದಾಗಿ ಕರ್ನಾಟಕದ ಮಲೆನಾಡು ಭಾಗದಲ್ಲಿ ಕಾಫಿ ಕ್ರಾಂತಿಯೇ ಉಂಟಾಯಿತು. ಪ್ಯಾರಿ ಕಂಪನಿಯ ಏಕಸ್ವಾಮ್ಯ ರದ್ದುಗೊಂಡ ಪರಿಣಾಮವಾಗಿ, ಮುಂದೆ ಥಾಮಸ್ ಕ್ಯಾನನ್ (1840) ಚಿಕ್ಕಮಗಳೂರಿನ ಮೈಲಿಮನೆಯಲ್ಲಿ ಸುಮಾರು 500 ಎಕರೆ ಜಾಗದಲ್ಲಿ ಹಾಗೂ ಫ್ರೆಡೆರಿಕ್ ಗ್ರೀನ್ (1843) ಹಾಸನ ಜಿಲ್ಲೆಯ ಸಕಲೇಶಪುರದ ಇಳಿಜಾರು ಪ್ರದೇಶದಲ್ಲಿ ಮುಕ್ತವಾಗಿ ತಮ್ಮ ಕಾಫಿ ಕೃಷಿಯನ್ನು ಪ್ರಾರಂಭಿಸಿದರು. ಇವರು ಇಲ್ಲಿ ಬೆಳೆದ ಕಾಫಿಯನ್ನು ಯುರೋಪಿನ ಮಾರುಕಟ್ಟೆಗೆ ನೇರವಾಗಿ ರಫ್ತು ಮಾಡುವ ಮೂಲಕ ಅಪಾರ ಖ್ಯಾತಿ ಮತ್ತು ಸಂಪತ್ತನ್ನು ಗಳಿಸಿದರು.

ಈ ಇಬ್ಬರು ಆರಂಭಿಕ ಬೆಳೆಗಾರರ ಯಶಸ್ಸಿನಿಂದ ಸ್ಫೂರ್ತಿ ಪಡೆದು ಭಾರತದತ್ತ ಮುಖ ಮಾಡಿದ ರಾಬರ್ಟ್ ಹೆನ್ರಿ ಎಲಿಯಟ್, ಕರ್ನಾಟಕದ ಕಾಫಿ ಉದ್ಯಮದ ಇತಿಹಾಸದಲ್ಲಿ ಪ್ರಮುಖ ಯುರೋಪಿಯನ್ ಪ್ಲ್ಯಾಂಟರ್ ಆಗಿ ಅಪಾರ ಕೊಡುಗೆ ನೀಡಿದರು.

1955 ರಲ್ಲಿ ಒಂದು ವರ್ಷ ಕಾಲ ಫ್ರೆಡೆರಿಕ್ ಗ್ರೀನ್ ಅವರ ಬಳಿ ಕಾಫಿ ಕೃಷಿಯ ಪ್ರಾಯೋಗಿಕ ತರಬೇತಿ ಪಡೆದ ಎಲಿಯಟ್, ಇಲ್ಲಿನ ಮಣ್ಣಿನ ಗುಣ ಹಾಗೂ ಸ್ಥಳೀಯ ಹವಾಮಾನವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರು.

ಮರು ವರ್ಷವೇ, ಅಂದರೆ 1856ರಲ್ಲಿ (ತಮ್ಮ ಕೇವಲ 19ನೇ ವಯಸ್ಸಿನಲ್ಲಿ), ಸಕಲೇಶಪುರದ ಹನ್ಬಾಳ್ ಪ್ರದೇಶದ 'ಬಾರ್ಟ್‌ಚಿನ್‌ಹಳ್ಳ' ಎಂಬಲ್ಲಿ ಸ್ವಂತ ಕಾಫಿ ಎಸ್ಟೇಟ್ ಸ್ಥಾಪಿಸುವ ಮೂಲಕ ಅವರು ಸಕಲೇಶಪುರ ಭಾಗದ ಎರಡನೇ ಯುರೋಪಿಯನ್ ಪ್ಲ್ಯಾಂಟರ್ ಆಗಿ ಗುರುತಿಸಿಕೊಂಡರು.!

ಹನ್ಬಾಳ್ ಪ್ರಾಂತ್ಯದ ಈ ಹೊಸ ಎಸ್ಟೇಟ್‌ನಲ್ಲಿ ಎಲಿಯಟ್ ಕೇವಲ ಉದ್ಯಮಿಯಾಗಿ ಮುನ್ನಡೆಯಲಿಲ್ಲ; ಬದಲಿಗೆ ಒಬ್ಬ ಸಂಶೋಧಕನಾಗಿ, ಕಾಫಿ ಬೆಳೆಗಾರರಿಗೆ ಮಾರ್ಗದರ್ಶನ ಮಾಡುವ ನಿಟ್ಟಿನಲ್ಲಿ ಕೃಷಿ ಪ್ರಯೋಗಗಳಲ್ಲಿ ತೊಡಗಿಸಿಕೊಂಡರು. ಆರಂಭಿಕ ದಿನಗಳಲ್ಲಿ ಮಲೆನಾಡಿನ ಕಠಿಣ ಹವಾಮಾನ, ಕಾಡು ಪ್ರಾಣಿಗಳ ಕಾಟ ಮತ್ತು ಸಾರಿಗೆ ಸಂಪರ್ಕದ ಕೊರತೆಗಳಿದ್ದರೂ ಧೃತಿಗೆಡದ ಅವರು, ತಮ್ಮ ಕಠಿಣ ಪರಿಶ್ರಮದಿಂದ ತೋಟವನ್ನು ಲಾಭದಾಯಕ ಹಳಿಗೆ ತಂದರು. ಬಾರ್ಟ್‌ಚಿನ್‌ಹಳ್ಳದ ಯಶಸ್ಸಿನಿಂದ ಪ್ರೇರಿತರಾದ ಅವರು, ನಂತರದ ದಶಕಗಳಲ್ಲಿ ತಮ್ಮ ಕಾಫಿ ಸಾಮ್ರಾಜ್ಯವನ್ನು ಮಂಜರಾಬಾದ್‌ನಿಂದ ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿ ಬೆಟ್ಟಗಳ ತಪ್ಪಲಿನವರೆಗೂ ವಿಸ್ತರಿಸುತ್ತಾ ಹೋದರು.

ಇವರ ವ್ಯವಸ್ಥಿತ ಬೇಸಾಯ ಕ್ರಮದಿಂದಾಗಿ ಮೈಸೂರು ಪ್ರಾಂತ್ಯದ ಕಾಫಿ ಅತ್ಯುನ್ನತ ಗುಣಮಟ್ಟವನ್ನು ಹೊಂದಿತ್ತು. ಇದು ಲಂಡನ್ ಮಾರುಕಟ್ಟೆಯಲ್ಲಿ "ಮೈಸೂರು ಕಾಫಿ" (Mysore Coffee) ಎಂಬ ವಿಶಿಷ್ಟ ಬ್ರಾಂಡ್ ಸೃಷ್ಟಿಸಲು ಕಾರಣವಾಯಿತು.

ಕಾಫಿ ಬೆಳೆಯುವ ಸಲುವಾಗಿ ಅರಣ್ಯವನ್ನು ಸಂಪೂರ್ಣವಾಗಿ ನಾಶ ಮಾಡುವ ಅಂದಿನ ಪಾಶ್ಚಿಮಾತ್ಯ ಪದ್ಧತಿಯನ್ನು ಎಲಿಯಟ್ ತೀವ್ರವಾಗಿ ವಿರೋಧಿಸಿದರು. ಮಲೆನಾಡಿನ ದಟ್ಟ ಕಾಡುಗಳ ಬೃಹತ್ ಮರಗಳನ್ನು ಹಾಗೆಯೇ ಉಳಿಸಿಕೊಂಡು, ಅವುಗಳ ನೈಸರ್ಗಿಕ ನೆರಳಿನಲ್ಲೇ ಕಾಫಿ ಗಿಡಗಳನ್ನು ಬೆಳೆಸುವ ನೂತನ ವೈಜ್ಞಾನಿಕ ವಿಧಾನವನ್ನು ಅವರು ಜಾರಿಗೆ ತಂದರು. ಈ ಪರಿಸರಸ್ನೇಹಿ ಮಾದರಿಯು ಪಶ್ಚಿಮ ಘಟ್ಟಗಳ ಸೂಕ್ಷ್ಮ ಮಣ್ಣಿನ ಸವೆತವನ್ನು ತಡೆದಿದ್ದಲ್ಲದೆ, ಕಾಫಿ ಗಿಡಗಳಿಗೆ ತಗಲುತ್ತಿದ್ದ ಕೀಟಬಾಧೆಯನ್ನು ನೈಸರ್ಗಿಕವಾಗಿಯೇ ನಿಯಂತ್ರಿಸಿತು. ಇಂದು ಇಡೀ ಜಗತ್ತಿನಲ್ಲಿ ಭಾರತದ ಕಾಫಿ 'ಪರಿಸರಸ್ನೇಹಿ ಮತ್ತು ನೆರಳಿನ ಕಾಫಿ' ಎಂದು ಮನ್ನಣೆ ಪಡೆಯಲು ಅಂದಿನ ಇವರ ದೂರದೃಷ್ಟಿಯೇ ಪ್ರಮುಖ ಕಾರಣವಾಯಿತು.

ಎಲಿಯಟ್ ಕೇವಲ ಒಬ್ಬ ಬ್ರಿಟಿಷ್ ಮಾಲೀಕನಾಗಿ ಉಳಿಯದೆ, ತಮ್ಮ ತೋಟಗಳಲ್ಲಿ ಕೆಲಸ ಮಾಡುತ್ತಿದ್ದ ಸ್ಥಳೀಯ ಮಲೆನಾಡಿನ ಕಾರ್ಮಿಕರೊಂದಿಗೆ ಅತ್ಯಂತ ಆಪ್ತ ಹಾಗೂ ಗೌರವಾನ್ವಿತ ಸಂಬಂಧವನ್ನು ಹೊಂದಿದ್ದರು. ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಗೆ ಒತ್ತು ನೀಡಿದ ಅವರು, ಸ್ಥಳೀಯ ಸಂಸ್ಕೃತಿ ಮತ್ತು ಭಾಷೆಯನ್ನು ಗೌರವಿಸುತ್ತಿದ್ದರು. ಮೈಸೂರು ಸಂಸ್ಥಾನದ ರಾಜಕೀಯ ಮತ್ತು ಆಡಳಿತ ಪ್ರಕ್ರಿಯೆಯಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದರು.

1881ರಲ್ಲಿ ಮೈಸೂರು ಮಹಾರಾಜರಾದ ಹತ್ತನೇ ಚಾಮರಾಜ ಒಡೆಯರ್ ಅವರು ಭಾರತದಲ್ಲೇ ಮೊದಲ ಬಾರಿಗೆ ಪ್ರಜಾಪ್ರಭುತ್ವ ಮಾದರಿಯ 'ಮೈಸೂರು ಜನಪ್ರತಿನಿಧಿ ಸಭೆ) ಆರಂಭಿಸಿದಾಗ, ಎಲಿಯಟ್ ಅವರು ಮಂಜರಾಬಾದ್ ಪ್ರಾಂತ್ಯದ ಪ್ಲ್ಯಾಂಟರ್‌ಗಳ ಪ್ರತಿನಿಧಿಯಾಗಿ ಆಯ್ಕೆಯಾದರು. ಆ ಅವಧಿಯಲ್ಲಿ ಅವರು ಮಲೆನಾಡಿನ ಕಡಿದಾದ ಘಟ್ಟಗಳಲ್ಲಿ ವ್ಯವಸ್ಥಿತ ರಸ್ತೆಗಳ ನಿರ್ಮಾಣ, ಮಂಗಳೂರು ಬಂದರಿಗೆ ಸಂಪರ್ಕ ಕಲ್ಪಿಸುವ ರೈಲ್ವೆ ಹಾಗೂ ಸಾರಿಗೆ ಮಾರ್ಗಗಳು ಮತ್ತು ಮೂಲಸೌಕರ್ಯ ಒದಗಿಸುವಂತೆ ಸಭೆಯಲ್ಲಿ ನಿರಂತರವಾಗಿ ಒತ್ತಾಯಿಸುತ್ತಿದ್ದರು. ತೋಟದ ಮಾಲೀಕರ ಹಿತರಕ್ಷಣೆಯ ಜೊತೆಗೆ, ಕಾಫಿ ತೋಟಗಳಲ್ಲಿ ಕೆಲಸ ಮಾಡುತ್ತಿದ್ದ ಸ್ಥಳೀಯ ಕಾರ್ಮಿಕರ ಆರೋಗ್ಯ ಸುಧಾರಣೆ ಹಾಗೂ ಮಲೇರಿಯಾ ನಿಯಂತ್ರಣಕ್ಕೆ ಸರ್ಕಾರದೊಂದಿಗೆ ಸಮಾಲೋಚನೆ ನಡೆಸುತ್ತಿದ್ದರು.

ತಮ್ಮ ನಾಲ್ಕು ದಶಕಗಳ ಸುದೀರ್ಘ ಮಲೆನಾಡಿನ ಅನುಭವಗಳನ್ನು ಎಲಿಯಟ್ ಜಗತ್ತಿಗೆ ಪುಸ್ತಕಗಳ ರೂಪದಲ್ಲಿ ನೀಡಿದ್ದಾರೆ. 1871ರಲ್ಲಿ ಲಂಡನ್‌ನಲ್ಲಿ ಅವರ ಮೊದಲ ಪುಸ್ತಕ "The Experiences of a Planter in the Jungles of Mysore" ಪ್ರಕಟವಾಯಿತು, ಇದು ಭಾರತಕ್ಕೆ ಬರುವ ಹೊಸ ಪ್ಲ್ಯಾಂಟರ್‌ಗಳಿಗೆ ದಿಕ್ಸೂಚಿಯಾಯಿತು. ತದನಂತರ, 1898ರಲ್ಲಿ ಅವರ ಶ್ರೇಷ್ಠ ಕೃತಿಯಾದ "Gold, Sport, and Coffee Planting in Mysore" ಹೊರಬಂದಿತು. ಈ ಪುಸ್ತಕವು ಕೇವಲ ಕಾಫಿ ಬೇಸಾಯದ ತಾಂತ್ರಿಕತೆಯನ್ನು ಮಾತ್ರವಲ್ಲದೆ, 19ನೇ ಶತಮಾನದ ಮಲೆನಾಡಿನ ಇತಿಹಾಸ, ಪರಿಸರ, ವನ್ಯಜೀವಿಗಳ ಬೇಟೆ ಮತ್ತು ಸ್ಥಳೀಯ ಜನಜೀವನವನ್ನು ಅತ್ಯಂತ ಸುಂದರವಾಗಿ ದಾಖಲಿಸಿದ ಅಮೂಲ್ಯ ಆಧಾರ ಗ್ರಂಥವಾಗಿದೆ. ಇಂದಿಗೂ ಕರ್ನಾಟಕದ ಕಾಫಿ ಇತಿಹಾಸವನ್ನು ಅಧ್ಯಯನ ಮಾಡಲು ಇವರ ಬರಹಗಳೇ ಮುಖ್ಯ ಮೂಲಗಳಾಗಿವೆ.

ಇವರು ಬಂದಾಗ ಮೈಸೂರು ಪ್ರಾಂತ್ಯದಲ್ಲಿ ಕೇವಲ 5,000 ಎಕರೆಗಳಷ್ಟು ಮಾತ್ರ ಇದ್ದ ಕಾಫಿ ತೋಟಗಳು ಇವರು ಮರಳುವ ವೇಳೆಗೆ ಸುಮಾರು 1,50,000 ಎಕರೆ ವಿಸ್ತರಿಸಿದ್ದವು.

1898ರ ನಂತರ ಸ್ಕಾಟ್‌ಲ್ಯಾಂಡ್‌ಗೆ ಮರಳಿದ ಎಲಿಯಟ್, ತಮ್ಮ ಜಮೀನಿನಲ್ಲಿ "ಕ್ಲಿಫ್ಟನ್ ಪಾರ್ಕ್ ಕೃಷಿ ಪದ್ಧತಿ" (Clifton Park System) ಯನ್ನು ರೂಪಿಸಿದರು. ಕೃತಕ ಗೊಬ್ಬರಗಳಿಲ್ಲದೆ, ಕೇವಲ ಆಳವಾದ ಬೇರುಬಿಡುವ ಹುಲ್ಲು ಮತ್ತು ಸಸ್ಯಗಳನ್ನು ಬಳಸಿ ಮಣ್ಣಿನ ಶಕ್ತಿ ಹೆಚ್ಚಿಸುವ ಇವರ ಈ ಮಾದರಿಯನ್ನು ಇಂದಿಗೂ ಜಾಗತಿಕ ಸಾವಯವ ಕೃಷಿಯ (Organic Farming) ಅಡಿಪಾಯ ಎಂದು ಪರಿಗಣಿಸಲಾಗುತ್ತದೆ.

1914ರಲ್ಲಿ ಸ್ಕಾಟ್‌ಲ್ಯಾಂಡ್‌ನಲ್ಲಿ ನಿಧನರಾದ ರಾಬರ್ಟ್ ಹೆನ್ರಿ ಎಲಿಯಟ್, ಕರ್ನಾಟಕದ ಮಣ್ಣಿನಲ್ಲಿ ಬಿಟ್ಟುಹೋದ ಕಾಫಿಯ ಸುವಾಸನೆ ಇಂದಿಗೂ ಅಮರವಾಗಿದೆ. ಪರಿಸರವನ್ನು ನಾಶಮಾಡದೆ ಉದ್ಯಮವನ್ನು ಹೇಗೆ ಬೆಳೆಸಬಹುದು ಎಂಬುದನ್ನು 150 ವರ್ಷಗಳ ಹಿಂದೆಯೇ ತೋರಿಸಿಕೊಟ್ಟ ಈ ಸಾಹಸಿ, ಕಾಫಿ ಕೃಷಿ ಇತಿಹಾಸದ ಸುವರ್ಣ ಪುಟಗಳಲ್ಲಿ ಶಾಶ್ವತವಾಗಿ ಉಳಿದಿದ್ದಾರೆ.

## ಕಾವ್ಯ ~ ಕಾರಂಜಿ

ಧರ್ಮದ ಅಮಲೇರಿದಾಗಲೆಲ್ಲ ಬುದ್ಧಿಗೆ ಗ್ರಹಣ
ಬಡಿಯುವುದು ಗುರೂಜಿ/
ಅಂತರಂಗದಲ್ಲಿದೆ ಅರಿವಿನ ಬೆಳಕು ಭಯವನು
ಓಡಿಸುವುದು ಗುರೂಜಿ//

ಮನದ ಗಾಯಕೆ ಮುಲಾಮು ಬೇಕಿಲ್ಲ ಮೌನವೇ
ನಿಜ ಔಷದಿಯಲ್ಲವೆ/
ಹೆಗಲೇರಿದರೆ ವಿಧಿ ಸಾಕಿದ ನಾಯಿಯು
ಮೃಗವಾಗುವುದು ಗುರೂಜಿ//

ಅಂತರಾತ್ಮವ ಸಾಯಿಸಿ ಮುಗುಳುನಗೆಯ
ಮುಖವಾಡ ಧರಿಸುವುದೇಕೆ/
ಮನಸಾಕ್ಷಿಗೆ ಹೆದರಿದ ಜೀವ ನಿದ್ರೆಯಲ್ಲೂ
ಬಡಬಡಿಸುವುದು ಗುರೂಜಿ//

ಅಚ್ಚರಿಗಳ ಆಗರ ಬದುಕು ನೋವುಗಳನು ದಡದಲಿ
ಬಿಟ್ಟು ಹೋಗುತ್ತದೆ/
ಆಯ್ಕೆಗಳಿಲ್ಲ ಇಲ್ಲಿ ಸ್ವೀಕರಿಸಬೇಕೆಂಬ ಭಾವ
ಮೂಡಿಸುವುದು ಗುರೂಜಿ//

ನಾನು ಎನ್ನುವ ಕರಿನೆರಳಲಿ ನಿಂತು ಸೌಹಾರ್ದತೆಯ
ಬಯಸುವದೇಕೆ ಶರಣ/
ಇದು ಕಲಿಯುಗ ಭ್ರಷ್ಟರ ಬಾಯಲಿ ಭಗವದ್ಗೀತೆ
ನುಡಿಸುವುದು ಗುರೂಜಿ//



ಸ್ವರಚಿತ : ಶರಣಗೌಡ ಪಾಟೀಲ ಜೈನಾಪುರ

## ಸ್ಥಾನಮಾನ

ಎಂದು ಕೈ ಚಾಚುವೆಯೊ ಅಂದು ನೀ
ಭಿಕ್ಷುಕನೊ!
ತಿರುಪೆ ಬೇಡಿದರಲ್ಲ ಗೌರವದ ಸ್ಥಾನ
ಅಭಿಮಾನ ಹೂ ಬಾಡಿ ಲತೆ ಬದುಕಿ
ಬಂತೇನು?
ನಡೆಯೊ ನೀ ತಲೆಯೆತ್ತಿ ಮುದ್ದುರಾಮ....



ಅಭಿಮಾನವೇ ಧನ ಸ್ವಾಭಿಮಾನವೇ ಮಾನ. ನಮ್ಮ ಆತ್ಮ ಗೌರವಕ್ಕೆ ಬೆಲೆ ಇಲ್ಲದಿದ್ದಲ್ಲಿ ಅಲ್ಲಿ ಯಾವ ಸುಖವಿಲ್ಲ... ಬದುಕಿನಲ್ಲಿ ಸಾಧಿಸಲು ಬೇಕಾದಷ್ಟಿದೆ ಅದಕ್ಕೆ ಸರಿದಾರಿಗಳನ್ನು ನಾವೇ ಅರಸಬೇಕು. ಬದುಕಿನಲ್ಲಿ ಹಣ ಒಂದೇ ಸಂತೃಪ್ತಿ ತರಲಾರದು. ಎಷ್ಟಿದ್ದರೂ ಮನುಜನ ಆಹಾರ, ನೀರು ಇವುಗಳಿಗೆ ಇಂದಿಗೂ ಅವನು ಪರ್ಯಾಯ ಹುಡುಕಲಿಕ್ಕಾ ಗಿಲ್ಲ. ನಮ್ಮ ಅವಶ್ಯಕತೆಗಿಂತ ಹೆಚ್ಚಿಗೆ ಇದ್ದದ್ದು ತೃಣಕ್ಕೆ ಸಮಾನ. ಸಾವಿರಾರು ಕೋಟಿಗಳಿಸಿದವರಿಗೆ ಅದನ್ನು ತೆರಿಗೆಯಿಂದ ಮುಚ್ಚಿಡುವುದು ಹೇಗೆ? ಅನ್ನುವ ಚಿಂತೆ ಕಾಡುತ್ತಿರುತ್ತದೆ .ಗಳಿಸಿ ಉಳಿಸಿ ಅದನ್ನು ಬೇರೆಯವರಿಗೆ ಇಟ್ಟು ಹೋಗುವವರಿಗೆ ಅದರಲ್ಲಿ ತಾವು ಎಷ್ಟು ಬಳಸುತ್ತೇವೆ ಅನ್ನುವ ವಿಚಾರ ಒಮ್ಮೆಯೂ ಬರುವುದಿಲ್ಲ. ಆ ಪ್ರಜ್ಞೆ ಜಾಗೃತವಾದರೆ ಅವರು ಇಷ್ಟೊಂದು ಗಳಿಸಲು ಹೋಗುವುದೇ ಇಲ್ಲ.... ನಮಗೆ ಉಪಯೋಗಕ್ಕೆ ಬಾರದ ಹೆಚ್ಚಿನ ಉಪಭೋಗ ಇದ್ದರೇನು ಇರದಿದ್ದರೇನು? ತಿಳಿದ ದಾರ್ಶನಿಕರು ಇದನ್ನು ಸಾರಿ ಸಾರಿ ಹೇಳಿದ್ದಾರೆ ಆದರೆ ಅಭಿಮಾನವ ಒತ್ತೆ ಇಟ್ಟು ಮನೆ ,ಮಠ, ಕುಟುಂಬಗಳಿಂದ, ದೂರವಿದ್ದು ಮನದ ನೇರಕ್ಕೆ ನಡೆಯದೇ ಅತೃಪ್ತ ಮನದವರಾಗಿ ಬಾಳಿನ ಜವಾಬ್ದಾರಿಗಳಿಂದ ವಿಮುಖರಾಗಿ ಬರಿ ದುಡ್ಡು ಗಳಿಸುವುದು ಒಂದೇ ಜೀವನದ ಪರಮಾದ್ಯತೆಯೆಂದು ತಿಳಿದು ಓಡುವವರೇ ಹೆಚ್ಚು.. ನಮ್ಮ ಚಿತ್ತ ನಮ್ಮ ಹಿಡಿತದಲ್ಲಿದ್ದಾಗ ಸಂತೃಪ್ತಿ ನಮ್ಮನ್ನರಸಿಕೊಂಡು ಬರುತ್ತದೆ. ಶ್ರೀ ರಾಮನಾಗಲಿ ಬುದ್ಧನಾಗಲಿ ವೈಭವದ ಅರಮನೆಯ ತ್ಯಜಿಸಿ ಬದುಕಿನಲ್ಲಿ ಸಂತೃಪ್ತಿಯಿಂದ ಬಾಳುವ ಬಗೆಯನ್ನು ತೋರಿಸಿಕೊಟ್ಟರು. ಸ್ಥಾನಮಾನಗಳೆಲ್ಲ ನಶ್ವರ ಎನ್ನುವುದನ್ನು ಮನಮುಟ್ಟುವಂತೆ ಜೀವನದಲ್ಲಿ ನಡೆದು ತೋರಿಸಿದರು. ಇದನ್ನು ನೋಡಿಯೂ ನಾವು ಅನುಸರಿಸಲಿಲ್ಲವೆಂದರೆ ನಾವು ಕಣ್ಣಿದ್ದರೂ ಕುರುಡರು, ದಿವಸಾಂಧರು!!! ನಮ್ಮ ಬಯಕೆಗೆ ಪರಿಧಿಯ ಗೆರೆಯನಾವೆಳೆದಾಗ ಬದುಕು ಸಂತೃಪ್ತಿಯ ಸಿರಿಧನ ಪಡೆದು ಸಂತುಷ್ಟವಾಗುತ್ತದೆ. ನಮ್ಮ ಸ್ವಾಭಿಮಾನ ನಮ್ಮ ಮೊದಲ ಆದ್ಯತೆಯಾಗಿರಬೇಕು. ಕನಕದಾಸರಿಗೆ ಜ್ಞಾನೋದಯವಾದಾಗ ತಮ್ಮೆಲ್ಲ ಸಿರಿತನವನ್ನು ದಾನ ಮಾಡಿ ಭಗವಂತನ ಆಶ್ರಯ ಪಡೆದು ನಿಜ ಸಿರಿತನವನ್ನು ಕಂಡರು. ಅವರ ಸ್ವಾಭಿಮಾನ ,ಮಾನ, ಸಿರಿತನವೆಲ್ಲ ಅವನಿಗೆ ಸಮರ್ಪಿಸಿದರು. ಬಾಳಲ್ಲಿರುವ ನಶ್ವರತೆಯ ಪ್ರತ್ಯಕ್ಷವಾಗಿ ತೋರಿಸಿದರು. ಶ್ರೀ ಸಿದ್ದೇಶ್ವರ ಸ್ವಾಮಿಗಳು ಕಲಿಗಾಲದಲ್ಲೂ ಕಣ್ತೆರೆಸಿದ ದೈವಾಂಶ ಸಂಭೂತರು. ಅವರ ಆದರ್ಶಗಳ ಜೀವನದಲ್ಲಿ ಅಳವಡಿಸಿಕೊಂಡರೆ ನಿಜವಾದ ಸಂಪದ ನಮ್ಮ ಜೀವನದಲ್ಲಿ ಇರುತ್ತದೆ. ಯಾವ ಸ್ಥಾನಮಾನ ಜೀವನದಲ್ಲಿ ಈ ಸಿರಿತನವನ್ನು ಕೊಡಲಾರವು. ಮನದ ನೆಮ್ಮದಿ ನಮ್ಮ ಆತ್ಮಾಭಿಮಾನ ಸಂತೃಪ್ತಿಯ ನಿಜತಾಣ.. ಅದನ್ನು ಅಲ್ಲಿಲ್ಲಿ ಅರಸದೆ ನಮ್ಮ ಇತಿಮಿತಿಗಳ ನರಿತು ಜೀವನ ನಿರ್ವಹಣೆಗಾಗಿ ಹಣ ಗಳಿಸುವುದು ಉತ್ತಮ. ನಮ್ಮತನವನ್ನು ಕಡೆಗೆಣಿಸಿ ಆತ್ಮಾಭಿಮಾನವನ್ನು ಒತ್ತೆಯಾಗಿರಿಸಿ ಗಳಿಸಿದ ಗಳಿಕೆಗೆ ಯಾವ ಬೆಲೆಯೂ ಇಲ್ಲ.. ಅಲ್ಲವೇ?...



ಆರತಿ ಏನ್ ರಾವ್

# ಶಾಸಕ ಸ್ಥಾನಕ್ಕೆ ಯಶವಂತರಾಯಗೌಡ ಪಾಟೀಲ್ ರಾಜೀನಾಮೆ, ಮನವೊಲಿಸಲೆತ್ನಿಸಿದ ಸಿಎಂ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಬರಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿ ತಮ ಕ್ಷೇತ್ರದ ಇಂಡಿ ಮತ್ತು ಚಡಚಣ ತಾಲ್ಲೂಕುಗಳನ್ನು ಸೇರ್ಪಡೆ ಮಾಡದಿರುವುದನ್ನು ವಿರೋಧಿಸಿ ಕಾಂಗ್ರೆಸ್ ಶಾಸಕ ಯಶವಂತರಾಯಗೌಡ ಪಾಟೀಲ್ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇಂಡಿ ಮತ್ತು ಚಡಚಣ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳ ಪಟ್ಟಿಗೆ ಸೇರಿಸದಿರುವುದರಿಂದ ಅಸಮಾಧಾನಗೊಂಡಿದ್ದ ಯಶವಂತರಾಯಗೌಡ ಪಾಟೀಲ್, ಇಂದು ಬೆಳಗ್ಗೆ ವಿಧಾನಸಭಾಧ್ಯಕ್ಷ ಬಿ.ಎಸ್. ಪಾಟೀಲ್ ಅವರನ್ನು ಭೇಟಿ ಮಾಡಿ ರಾಜೀನಾಮೆ ಪತ್ರ ಸಲ್ಲಿಸಿದರು. ತಮ ಕ್ಷೇತ್ರವನ್ನು ಬರ ಘೋಷಣೆಯ ವಿಚಾರದಲ್ಲಿ ಕಡೆಗಣಿಸಲಾಗಿದೆ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದರು.**

ಆಡಳಿತ ಪಕ್ಷದ ಶಾಸಕನಾಗಿ ನಾನು ಸರ್ಕಾರಕ್ಕೆ ಮುಜುಗರವಾಗಬಾರದು ಎಂದು ಹಲವು ಬಾರಿ ಮನವಿ ಮಾಡಿಕೊಂಡಿದ್ದೇನೆ. ಆದರೆ ನಮ ಮಾತಿಗೆ ಮತ್ತು ಭಾವನೆಗಳಿಗೆ ಬೆಲೆ ಸಿಗುತ್ತಿಲ್ಲ. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಒತ್ತಡ ಹೇರುವ ಬಲಾಢ್ಯರಿಗಷ್ಟೇ ಮನ್ನಣೆ ದೊರೆಯುತ್ತಿದೆ. ಕ್ಷೇತ್ರದ ಜನರ ಆಶೋತ್ತರಗಳಿಗೆ ಸ್ಪಂದಿಸಲಾಗದೇ ಇರುವುದರಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.



ಈ ಬೆಳವಣಿಗೆ ಕಾಂಗ್ರೆಸ್ ವಲಯದಲ್ಲಿ ಸಂಚಲನ ಮೂಡಿಸಿದ್ದು, ವಿಷಯ ತಿಳಿಯುತ್ತಿದ್ದಂತೆ ವಿಧಾನಸಭಾಧ್ಯಕ್ಷರ ಕಚೇ–ರಿಯಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮಾಹಿತಿ ರವಾನೆಯಾಗಿದೆ.

ಕೂಡಲೇ ವಿಧಾನಸಭೆಗೆ ಆಗಮಿಸಿದ ಮುಖ್ಯಮಂತ್ರಿ ಅವರು ಸದನದ ಕಲಾಪದಲ್ಲಿ ಭಾಗವಹಿಸದೆ ಮೂರನೇ ಮಹಡಿಯಲ್ಲಿರುವ ತಮ ಕಚೇರಿಗೆ ತೆರಳಿದರು. ಬಳಿಕ ಯಶವಂತರಾಯಗೌಡ ಪಾಟೀಲ್ ಅವರನ್ನು ತಮ ಕಚೇರಿಗೆ ಕರೆಸಿಕೊಂಡು ಮಾತುಕತೆ ನಡೆಸಿದರು. ಬರ ಘೋಷಣೆಗೆ ಕೇಂದ್ರ ಸರ್ಕಾರದ ಮಾನದಂಡಗಳು ಹಾಗೂ ಇಂಡಿ ಮತ್ತು ಚಡಚಣ ತಾಲ್ಲೂಕುಗಳಲ್ಲಿನ ವಾಸ್ತವ ಪರಿಸ್ಥಿತಿಗಳ ಕುರಿತು ಮುಖ್ಯಮಂತ್ರಿ ಶಾಸಕರಿಗೆ ವಿವರಿಸಿದರು ಎನ್ನಲಾಗಿದೆ.

ದುಡುಕಿನ ನಿರ್ಧಾರ ಕೈಗೊಳ್ಳಬೇಡಿ: ಸಿಎಂ ಮನವಿ

ಬರಪೀಡಿತ ತಾಲ್ಲೂಕುಗಳ ಘೋಷಣೆ ಪ್ರಕ್ರಿಯೆ ಇಲ್ಲಿಗೆ ಮುಗಿದಿಲ್ಲ. ಮುಂದಿನ ಹಂತದಲ್ಲಿ ಇನ್ನಷ್ಟು ತಾಲ್ಲೂಕುಗಳನ್ನು ಪರಿಗಣಿಸಲಾಗುವುದು. ಆ ಸಂದರ್ಭದಲ್ಲಿ ನಿಮ ಕ್ಷೇತ್ರದ ತಾಲ್ಲೂಕುಗಳನ್ನೂ ಬರಪೀಡಿತ ಪಟ್ಟಿಗೆ ಸೇರಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು. ಹೀಗಾಗಿ ದುಡುಕಿನ ನಿರ್ಧಾರ ಕೈಗೊಳ್ಳದೆ ರಾಜೀನಾಮೆ ಹಿಂಪಡೆಯುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಯಶವಂತರಾಯಗೌಡ ಪಾಟೀಲ್ ಅವ–ರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ ಎನ್ನಲಾಗಿದೆ. ಸಂದರ್ಭದಲ್ಲಿ ತಮಗೆ ಸಚಿವ ಸ್ಥಾನ ನೀಡದಿರುವುದಕ್ಕೆ ಅಸಮಾಧಾನಗೊಂಡಿದ್ದ ಯಶವಂತರಾಯಗೌಡ ಪಾಟೀಲ್ ರಾಜೀನಾಮೆ ನೀಡುವ ಎಚ್ಚ–ರಿಕೆ ನೀಡಿದ್ದರು. ಆ ಸಂದರ್ಭದಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರು ಮಧ್ಯಪ್ರವೇಶಿಸಿ ಅವರೊಂದಿಗೆ ಮಾತುಕತೆ ನಡೆಸಿದ್ದರು. ಬಳಿಕ ವಿಜಯಪುರಕ್ಕೆ ತೆರಳಿದ್ದ ಅವರು ರಾಜೀನಾಮೆ ನಿರ್ಧಾರವನ್ನು ಕೈಬಿಡುವುದಾಗಿ ಘೋಷಿಸಿದ್ದರು.ಆ ಸಂದರ್ಭದಲ್ಲಿ ತಾವು ಪಕ್ಷದ ಶಿಸ್ತಿನ ಸಿಪಾಯಿಯಾಗಿದ್ದು, ಕಾಂಗ್ರೆಸ್ ತೊರೆಯುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದರು.

ಬರ ಘೋಷಣೆ ವಿಚಾರ ಸರ್ಕಾರಕ್ಕೆ ತಲೆನೋವು:

ರಾಜ್ಯದಲ್ಲಿ ಬರಪೀಡಿತ ತಾಲ್ಲೂಕುಗಳ ಘೋಷಣೆ ವಿಚಾರ ಆಡಳಿತಾರೂಢ ಕಾಂಗ್ರೆಸ್ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ. ಹಲವು ಆಡಳಿತ ಪಕ್ಷದ ಶಾಸಕರು ತಮ ಕ್ಷೇತ್ರಗಳನ್ನು ಬರಪೀಡಿತ ತಾಲ್ಲೂಕುಗಳ ಪಟ್ಟಿಗೆ ಸೇರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ. ಗದಗ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸದಿದ್ದರೆ ರಾಜೀನಾಮೆ ನೀಡುವುದಾಗಿ ಕಾಂಗ್ರೆಸ್‌ನ ಹಿರಿಯ ನಾಯಕ ಹೆಚ್. ಕೆ.ಪಾಟೀಲ್, ಬಹಿರಂಗವಾಗಿ ಎಚ್ಚರಿಕೆ ನೀಡಿದ್ದಾರೆ.

ಇದೇ ವೇಳೆ ಮುದ್ದೇಬಿಹಾಳ ತಾಲ್ಲೂಕು ಕೂಡ ಇನ್ನೂ ಬರಪೀಡಿತ ಎಂದು ಘೋಷಣೆಯಾಗಿಲ್ಲ. ಅಲ್ಲಿನ ಶಾಸಕ ಅಪ್ಪಾಜಿ ನಾಡಗೌಡ ಅವರು ಕೂಡ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದು, ಅಗತ್ಯ ಕ್ರಮ ಕೈಗೊಳ್ಳದಿದ್ದರೆ ತಹಶೀಲ್ದಾರ್ ಕಚೇರಿ ಎದುರು ಧರಣಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಹೀಗೆ ಬರಪೀಡಿತ ತಾಲ್ಲೂಕುಗಳ ಘೋಷಣೆ ವಿಚಾರದಲ್ಲಿ ಆಡಳಿತ ಪಕ್ಷದ ಶಾಸಕರಿಂದಲೇ ಒತ್ತಡ ಹೆಚ್ಚುತ್ತಿರುವುದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರಕ್ಕೆ ಹೊಸ ತಲೆನೋವಾಗಿ ಪರಿಣಮಿಸಿದೆ. ವಿಧಾನಸಭೆಯಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಇದೊಂದು ಆತಂಕ ಕಾರಿ ವಿಷಯ. ಹೀಗೂ ಉಂಟೆಂದು ಹೇಳಿ ಶಾಸಕ ಯಶವಂತರಾಯ ಗೌಡ ಪಾಟೀಲ್ ಅವರ ರಾಜೀನಾಮೆಯ ಪತ್ರವನ್ನು ಓದಿದರು. ಸರ್ಕಾರಕ್ಕೆ ನಾಚಿಕೆಯಾಗಬೇಕು ಆಡಳಿತ ಪಕ್ಷದ ಶಾಸಕರೇ ರಾಜೀನಾಮೆ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು. ಇದು ಆಡಳಿತ ಮತ್ತು ಪ್ರತಿ ಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿಗೆ ಕಾರಣವಾಯಿತು.

## ಜ್ಞಾನವಿಕಾಸ ಕೇಂದ್ರದಡಿ ಜ್ಞಾನ ವಿಕಾಸ ಕೇಂದ್ರದಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಇಂದು ಯಲಹಂಕ ತಾಲೂಕಿನ ಶಿವಕೋಟೆ ವಲಯದ ಬ್ಯಾಲಕೆರೆ ಗ್ರಾಮದ ಸ್ಫೂರ್ತಿ ಜ್ಞಾನ ವಿಕಾಸ ಕೇಂದ್ರದಲ್ಲಿ ಪೂಜ್ಯ ಖಾವಂದರು ಹಾಗೂ ಮಾತೃಶ್ರೀ ಅಮ್ಮನವರ ಆಶೀರ್ವಾದದಿಂದ ಸ್ಫೂರ್ತಿ ಜ್ಞಾನ ವಿಕಾಸ ಕೇಂದ್ರದ ವಾರ್ಷಿಕೋತ್ಸವ ಕಾರ್ಯಕ್ರಮ ವನ್ನು ಹಮ್ಮಿಕೊಂಡಿದ್ದು ಕಾರ್ಯಕ್ರಮ ಕ್ಕೆ ಎಲ್ಲರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸಲಾಯಿತು.**



ಮಾತೃಶ್ರೀ ಹೇಮಾವತಿ ಅಮ್ಮನವರ ಕನಸಿನ ಕೂಸಾದ ಜ್ಞಾನ ವಿಕಾಸ ಕಾರ್ಯಕ್ರಮ ದಲ್ಲಿ ಪ್ರತಿ ತಿಂಗಳು ಮಾಸಿಕ ಸಭೆಯ ಮೂಲಕ ಸದಸ್ಯರು ಗಳಿಗೆ ಮಾಹಿತಿ ಕಾರ್ಯಕ್ರಮ ದ ಜೊತೆಗೆ ಕೇಂದ್ರದ ವಾರ್ಷಿಕೋತ್ಸವ,ಸ್ವ ಉದ್ಯೋಗ ತರಬೇತಿ, ಪೌಷ್ಟಿಕ ಆಹಾರ ಕಾರ್ಯಕ್ರಮ, ಆರೋಗ್ಯ ತಪಾಸಣಾ ಶಿಬಿರ, ಹೊಲಿಗೆ ತರಬೇತಿ, ಉಚಿತ ಟ್ಯೂಷನ್ ಕ್ಲಾಸ್ ಇನ್ನು ಹಲವು ಸಮುದಾಯ ಅಭಿವೃದ್ಧಿ ಕಾರ್ಯಗಳನ್ನು ಪೂಜ್ಯರು ಮಾಡುತಿದ್ದಾರೆ ಇದರ ಉಪಯೋಗ ಪಡೆದುಕೂಳ್ಳುವಂತೆ ಸದಸ್ಯರು ಗಳಿಗೆ ತಿಳಿಸಲಾಯಿತು. ಶಾಲಾ ಮುಖ್ಯ ಶಿಕ್ಷಕರು ಮಾತನಾಡಿ ತಮ್ಮ ಶಾಲೆಗೆ ಪೂಜ್ಯರು ಬೇಂಚ್ ಮತ್ತು ಡೆಸ್ಕ್ ನೀಡಿರುವುದಾಗಿ ತಿಳಿಸಿ ಪೂಜ್ಯರಿಗೆ ಮತ್ತು ಅಮ್ಮನವರಿಗೆ ನಮಸ್ಕಾರಗಳನ್ನು ತಿಳಿಸಿದರು. ಸ್ಪರ್ಧೆಯಲ್ಲಿ ವಿಜೇತರಾದ ಸದಸ್ಯರು ಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ತಾಲೂಕಿನ ಯೋಜನಾಧಿಕಾರಿ ಸವಿತಾ ಶೆಟ್ಟಿ ,ಜ್ಞಾನ ವಿಕಾಸ ಸಮನ್ವಯಾಧಿಕಾರಿ ಅನಿತಾ. ಕೆ ಎಸ್, ಶಿವಕೋಟೆ ವಲಯ ಮೇಲ್ವಿಚಾರಕರು ಊರಿನ ಮುಖಂಡರಾದ ವಿಜಯಕುಮಾರ್, ಶಾಲಾ ಮುಖ್ಯ ಶಿಕ್ಷಕರಾದ ಲೀಲಾವತಿ , ಅನ್ನಪೂರ್ಣ, ಒಕ್ಕೂಟದ ಅಧ್ಯಕ್ಷ ರಾದ ಶಶಿಕಲಾ ಸೇವಾಪ್ರತಿನಿಧಿಗಳು ಸಂಘದ ಸದಸ್ಯರು ಹಾಜರಿದ್ದರು.

# ನಾಡಹಬ್ಬ ದಸರಾಗೆ ಸಿದ್ಧತೆ : ಅರಮನೆ ನಗರಿಯಲ್ಲಿ ಭರದಿಂದ ಸಾಗಿವೆ ವಿವಿಧ ಕಾಮಗಾರಿಗಳು

ಅ.ಶ. ಸುದ್ದಿ ಮೈಸೂರು

**ಮೈಸೂರು: ನಾಡಹಬ್ಬ ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗುತ್ತಿದ್ದಂತೆ ನಗರದ ರಾಜಮಾರ್ಗ ಸೇರಿದಂತೆ ವಿವಿಧೆಡೆ ದಸರಾ ಕಾಮಗಾರಿಗಳು ಭರದಿಂದ ಸಾಗಿವೆ. ಸೆ.30ರೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಗಡುವು ನೀಡಲಾಗಿದೆ. ಕಳೆದ ಒಂದು ವಾರದಿಂದ 24 ಗಂಟೆಯೂ ಕಾಮಗಾರಿ ನಡೆಯುತ್ತಿದ್ದು, ದಸರಾ ಆರಂಭಕ್ಕೂ ಮುನ್ನ ರಸ್ತೆ ಕಾಮಗಾರಿ ಸೇರಿದಂತೆ ಎಲ್ಲಾ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮೈಸೂರು ನಗರಪಾಲಿಕೆ ಕ್ರಮ ಕೈಗೊಂಡಿದೆ.**

ಮಳೆಯಿಂದ ಹಾಳಾಗಿದ್ದ ಫುಟ್‌ಪಾತ್‌ಗಳನ್ನು ದುರಸ್ತಿಪಡಿಸಲಾಗುತ್ತಿದ್ದು, ಯುಜಿಡಿ ಕಾಮಗಾರಿಗಾಗಿ ಅಗೆದಿದ್ದ ಗುಂಡಿಗಳನ್ನು ಮುಚ್ಚಿ ಡಾಂಬರೀಕರಣ ಮಾಡಲಾಗುತ್ತಿದೆ. ಈ ಹಿಂದೆ ದಸರಾ ಸಮೀಪಿಸಿದಾಗ ಕಾಮಗಾರಿ ಆರಂಭಿಸುತ್ತಿದ್ದರಿಂದ ದಸರಾ ವೇಳೆಯೂ ಕಾಮಗಾರಿ ಮುಂದುವರಿಯುತ್ತಿತ್ತು. ಇದ–ರಿಂದ ಅವಸರದ ಹಾಗೂ ಕಳಪೆ ಕಾಮಗಾರಿ ನಡೆಯುತ್ತಿತ್ತು. ಇದನ್ನು ಮನಗಂಡ ನಗರಪಾಲಿಕೆ ಆಯುಕ್ತೆ ಎಂ.ಕೆ. ಸವಿತಾ ಅವರು ಎರಡು ತಿಂಗಳ ಮುಂಚಿತವಾಗಿಯೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾರ್ಯಾದೇಶ ನೀಡಿದ್ದ–ರಿಂದ ಈ ಬಾರಿ ಎಲ್ಲೆಡೆ ಕಾಮಗಾರಿ ನಡೆಸಲು



ಸಾಧ್ಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

5.96 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ

ದಸರಾ ಅಂಗವಾಗಿ 5.96 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕೆ.ಆರ್. ವೃತ್ತ, ಚಾಮರಾಜೇಂದ್ರ ಒಡೆಯರ್ ವೃತ್ತ, ಚಾಮರಾಜ ವೃತ್ತ ಹಾಗೂ ಆಯುರ್ವೇದ ವೃತ್ತಗಳ ರಸ್ತೆಗಳಲ್ಲಿ ಡಾಂಬರೀಕರಣ, ಗ್ರಿಲ್ ದುರಸ್ತಿ ಹಾಗೂ ಬಣ್ಣ ಬಳಿಯುವ ಕೆಲಸ ನಡೆಯುತ್ತಿದೆ.ಫುಟ್‌ಪಾತ್‌ನ ಎರಡೂ ಬದಿಗಳಲ್ಲಿ ಹಾಳಾಗಿರುವ ಟೈಲ್ಸ್‌ಗಳನ್ನು ತೆಗೆದು ಹೊಸ ಟೈಲ್ಸ್ ಅಳವಡಿಸಿ ಬಣ್ಣ ಬಳಿಯಲಾಗುತ್ತಿದೆ. ಆಯುರ್ವೇದ ಕಾಲೇಜು ವೃತ್ತದ ಬಳಿ ಟೈಲ್ಸ್ ಬದಲಾವಣೆ ಕಾರ್ಯ ಭರದಿಂದ ಸಾಗಿದೆ.

ಬಂಬೂಬಜಾರ್‌ನಿಂದ

ಬನ್ನಿಮಂಟಪದವರೆಗೆ ಹಾಗೂ ನೆಲ್ಸನ್ ಮಂಡೇಲಾ ರಸ್ತೆಯವರೆಗೆ ಫುಟ್‌ಪಾತ್ ದುರಸ್ತಿ, ಪೇಂಟಿಂಗ್, ಕರ್ಬ್ ಪೇಂಟಿಂಗ್ ಮತ್ತು ಕಾರಂಜಿ ದುರಸ್ತಿ ಕಾರ್ಯ ನಡೆಯುತ್ತಿದೆ.ಯು–ಜಿಡಿ ಕಾಮಗಾರಿಗಾಗಿ ಅಗೆದಿದ್ದ ಜಾಗಗಳಲ್ಲಿ ಜಲ್ಲಿ, ಮಣ್ಣು ತುಂಬಿ ಮುಚ್ಚಿ ಡಾಂಬ–ರೀಕರಣ ಮಾಡಲಾಗುತ್ತಿದೆ. ಬೆಂಗಳೂರು ರಸ್ತೆ, ಗನ್‌ಹೌಸ್ ವೃತ್ತದಿಂದ ಎಲೆತೋಟದ ರಸ್ತೆ, ಕೃಷ್ಣರಾಜ ಬುಲೆವಾರ್ಡ್ ರಸ್ತೆಯಿಂದ ಏಕಲವ್ಯ ವೃತ್ತ, ವಿನೋಬಾ ರಸ್ತೆ ಹಾಗೂ ಧನ್ವಂತರಿ ರಸ್ತೆ ಮಾರ್ಗಗಳಲ್ಲಿ ಪೇಂಟಿಂಗ್, ಕರ್ಬ್ ಪೇಂಟಿಂಗ್ ಮತ್ತು ಟೈಲ್ಸ್ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಪಾಲಿಕೆ ಮೂಲಗಳು ತಿಳಿಸಿವೆ.

ಮೈಸೂರು ದಸರಾ ಅಂಗವಾಗಿ ಅ.2,3ರಂದು ಚಿತ್ರಸಂತೆ : ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಈ ಬಾರಿ ಚಿತ್ರಸಂತೆಯನ್ನು ಅ.2 ಮತ್ತು 3 ರಂದು ಆಯೋಜಿಸಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಕ್ಲಾಕ್ ಟವರ್ ಮುಂಭಾಗದ ರಸ್ತೆಯಲ್ಲಿ ಚಿತ್ರಸಂತೆ ನಡೆಯಲಿದೆ.ಚಿತ್ರಸಂತೆಯಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಕಲಾವಿದರು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಸೆ.24 ಕೊನೆಯ ದಿನಾಂಕವಾಗಿದೆ.

ಬಂದಿರುವ ಅರ್ಜಿಗಳನ್ನು ಆಯ್ಕೆ ಸಮಿತಿ ಪರಿಶೀಲಿಸಿ, ಶಿಫಾರಸಿನ ಮೇರೆಗೆ ಅರ್ಹ ಕಲಾವಿದರಿಗೆ ಮಳಿಗೆಗಳನ್ನು ನೀಡಲಾಗುವುದು. ಎರಡು ದಿನಗಳ ಕಾಲ ನಡೆಯುವ ಈ ಸಂತೆಯಲ್ಲಿ ಸಾರ್ವಜನಿಕರು ವಿವಿಧ ಕಲಾಕೃತಿಗಳನ್ನು ವೀಕ್ಷಿಸಲು ಮತ್ತು ಖರೀದಿಸಲು ಅವಕಾಶ ಇರಲಿದೆ. ಆನ್ ಲೈನ್ ನೋಂದಣಿಗಾಗಿ ಪ್ರಕಟಣೆಯಲ್ಲಿರುವ ಕ್ಯೂ ಆರ್ ಕೋಡ್ ಬಳಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 88613 98811 ಅನ್ನು ಸಂಪರ್ಕಿಬಹುದು.

# ಕೆಪಿಎಸ್ಸಿ ಮುಚ್ಚುವೆ ಎಂದ ಮುಖ್ಯಮಂತ್ರಿಗೆ ಶಾಸನದ ಗಂಧಗಾಳಿ ಗೊತ್ತಿಲ್ಲ, ಹೆಚ್.ಡಿ.ಕುಮಾರಸ್ವಾಮಿ ಟೀಕೆ



ಕಾನೂನು ತಜ್ಞರ ಜತೆ ಚರ್ಚೆ ನಡೆಸುತ್ತಿದ್ದೇವೆ ಎಂದು ಹೇಳಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ಕೆಪಿಎಸ್‌ಸಿಯನ್ನು ಮುಚ್ಚಲು ವಿರುದ್ಧ ಹರಿಹಾಯ್ದಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗೆ ಶಾಸನದ ಮಹತ್ವವೇ ಗೊತ್ತಿಲ್ಲದಂತಿದೆ ಎಂದು ಟೀಕಿಸಿದ್ದಾರೆ.**

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಕೇಂದ್ರ ಸಚಿವರು, ಕರ್ನಾಟಕ ಲೋಕಸೇವಾ ಆಯೋಗ (KPSC) ವನ್ನು ಶಾಸನಬದ್ಧವಾಗಿ ಮುಚ್ಚುತ್ತೇವೆ ಎನ್ನುವ ಮುಖ್ಯಮಂತ್ರಿ ಹೇಳಿಕೆ ಕೇವಲ ಹತಾಶೆಯಿಂದಷ್ಟೇ ಕೂಡಿಲ್ಲ, ಅದು ಬುದ್ಧಿಗೇಡಿತನ, ಹೊಣೆಗೇಡಿತನ ಮತ್ತು ಅಜ್ಞಾನದ ಪರಮಾವಧಿ. ಇವರ ವರಸೆ ಹೇಗಿದೆ ಎಂದರೆ 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತೆ, 'ನೆಗಡಿ ಬಂದರೆ ಮೂಗಿಗೇ ಕತ್ತರಿ ಹಾಕಿದಂತೆ ಎಂದು ಲೇವಡಿ ಮಾಡಿದ್ದಾರೆ.

ಕೆಪಿಎಸ್ಸಿ ಸಂಸ್ಥೆ ಚೆನ್ನಾಗಿಯೇ ಇದೆ, ಕೆಟ್ಟ ಜನ ಬಂದು ಕೂತಿದ್ದಾರಷ್ಟೇ. ಬೇಲಿಯೇ ಹೊಲ ಮೇಯುತ್ತಿದೆ. ಅಲ್ಲಿಗೆ ಖದೀಮರನ್ನು ನೇಮಕ ಮಾಡಿದ್ದು ಯಾರು? ವಸೂಲಿಗೆ ಅಂಗಡಿ ತೆರೆಯಲು ಅವಕಾಶ ಕೊಟ್ಟಿದ್ದು ಯಾರು? ವಿಧಾನಸೌಧದ 3ನೇ ಮಹಡಿಯಲ್ಲಿ ಕೂತವರೇ ಎಸಗಿದ ಪಾಪವಲ್ಲವೇ ಇದು? ಆ ಲೆಕ್ಕಕ್ಕೆ ಬಂದರೆ ವಿಧಾನಸೌಧವನ್ನೇ ಮುಚ್ಚಬೇಕು.

ನಿಮ್ಮ ಸಾರಥ್ಯದಲ್ಲಿ ಅದೂ ನಡೆದುಹೋಗಲಿ ಎಂದು ಮುಖ್ಯಮಂತ್ರಿಗೆ ಕೇಂದ್ರ ಸಚಿವರು ಟಾಂಗ್ ನೀಡಿದ್ದಾರೆ. ಬೇಜವಾಬ್ದಾರಿಯಿಂದ ಚಪಲಕ್ಕೆ ನಾಲಿಗೆ ಜಾರುವ ಮೊದಲು ಕೆಪಿಎಸ್ಸಿ ಎಂದರೆ ಏನು? ಅದರ ಸಂರಚನೆ, ಸ್ವರೂಪ ಹೇಗಿರುತ್ತದೆ? ಸಾಂವಿಧಾನಿಕವಾಗಿ ಅದಕ್ಕಿರುವ ರಕ್ಷಣೆ ಏನು? ಆ ಸಂಸ್ಥೆ ನಡೆದುಬಂದ ಹಾದಿ, ಹೆಗ್ಗಳಿಕೆ ಬಗ್ಗೆ ತಿಳಿದುಕೊಳ್ಳಿ. ಹೊಲಕ್ಕೆ ಕಳೆ ಬಿದ್ದರೆ ಅದನ್ನು ಕಿತ್ತೆಸೆಯಬೇಕು, ಹೊಲಕ್ಕೇ ವಿಷವುಣಿಸುವ ಕೆಲಸ ಆಗಬಾರದು ಎಂದು ಕಿವಿಮಾತು ಹೇಳಿದ್ದಾರೆ.

# ಆಂಟಿಬಯೋಟಿಕ್, ನೋವು ನಿವಾರಕಗಳ ಅಕ್ರಮ ಬಳಕೆಗೆ ಕಡಿವಾಣ ಹಾಕಲು ಹೊಸ ನಿಯಮ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಔಷಧಿಗಳ ಅಕ್ರಮ ಮಾರಾಟ, ಸ್ವಯಂ ಚಿಕಿತ್ಸೆಯಿಂದ ಉಂಟಾಗುತ್ತಿರುವ ಸಮಸ್ಯೆ ಹಾಗೂ ಆಂಟಿಬಯೋಟಿಕ್‌ಗಳ ಅತಿಯಾದ ಬಳಕೆಗೆ ಕಡಿವಾಣ ಹಾಕಲು ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ಹೊಸ ಸಲಹಾ ಮಾರ್ಗಸೂಚಿ ಹೊರಡಿಸಿದೆ. ಆಂಟಿಬಯೋಟಿಕ್‌ಗಳು ಹಾಗೂ ನೋವು ನಿವಾರಕ ಔಷಧಿಗಳ ಅಸಮರ್ಪಕ ಬಳಕೆಯಿಂದ ದೀರ್ಘಕಾಲೀನ ಕಿಡ್ನಿ ಕಾಯಿಲೆ ಸೇರಿದಂತೆ ಗಂಭೀರ ಆರೋಗ್ಯ ಸಮಸ್ಯೆಗಳು ಉಂಟಾಗುವ ಸಾಧ್ಯತೆಯ ಬಗ್ಗೆ ಸಂಸ್ಥೆ ಎಚ್ಚರಿಕೆ ನೀಡಿದೆ.**

ವಿಶೇಷವಾಗಿ ಆಂಟಿಬಯೋಟಿಕ್‌ಗಳು ಹಾಗೂ ನಾನ್–ಸ್ಟಿರಾಯ್ಡಲ್ ಆ?ಯಂಟಿ–ಇನ್‌ಫ್ಲಮೇಟರಿ ಡ್ರಗ್ಸ್ (ಎನ್‌ಎಸ್‌ಎಐಡಿಎಸ್) ಬಳಕೆಯಲ್ಲಿ ವೈದ್ಯರು, ಫಾರ್ಮಸಿಸ್ಟ್‌ಗಳು, ರಿಟೈಲರ್‌ಗಳು, ವಿತರಕರು ಹಾಗೂ ಆರೋಗ್ಯ ಸೇವಾ ಸಂಸ್ಥೆಗಳು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ವೈದ್ಯರಿಗೆ ಏನು ನಿಯಮ?

ರೋಗಿಯ ವಯಸ್ಸು, ಕಾಯಿಲೆಯ ಸ್ವರೂಪ, ಇತರ ಆರೋಗ್ಯ ಸಮಸ್ಯೆಗಳು, ಈಗಾಗಲೇ ಪಡೆಯುತ್ತಿರುವ



ಔಷಧಿಗಳು ಹಾಗೂ ಸಂಬಂಧಿತ ಅಪಾಯಗಳನ್ನು ಪರಿಗಣಿಸಿ ಮಾತ್ರ ಆಂಟಿಬಯೋಟಿಕ್ ಅಥ–ವಾ ನೋವು ನಿವಾರಕ ಔಷಧಿಗಳನ್ನು ಸೂಚಿಸಬೇಕು. ಅಗತ್ಯವಿದ್ದಾಗ ಮಾತ್ರ ಔಷಧಿ ನೀಡಬೇಕು. ಸೂಕ್ತ ಪ್ರಮಾಣದಲ್ಲಿ ಹಾಗೂ ಅಗತ್ಯವಿರುವ ಅವಧಿಗೆ ಮಾತ್ರ ಔಷಧಿ ಬಳಸುವಂತೆ ವೈದ್ಯರಿಗೆ ಸೂಚಿಸಲಾಗಿದೆ. ಕಿಡ್ನಿ ಸಮಸ್ಯೆ ಇರುವವರು ಹಾಗೂ ಕಿಡ್ನಿ ಹಾನಿಯ ಅಪಾಯ ಹೊಂದಿರುವವರು ನೋವು ನಿವಾರಕ ಔಷಧಿಗಳನ್ನು ಬಳಸುವ ಮುನ್ನ ವೈದ್ಯರಿಗೆ ಮಾಹಿತಿ ನೀಡಬೇಕು.

ನಿರ್ಜಲೀಕರಣ ಅಥವಾ ಇತರ ಆರೋಗ್ಯ ಸಮಸ್ಯೆ ಇರುವವರಲ್ಲೂ ಔಷಧಿ ಬಳಕೆಯಲ್ಲಿ ಮುನ್ನೆಚ್ಚರಿಕೆ ವಹಿಸಬೇಕು. ಸೋಂಕಿನ ಸ್ವರೂಪ, ಸೋಂಕು ಉಂಟಾಗಿರುವ ಸ್ಥಳ ಹಾಗೂ ಅದರ ತೀವ್ರತೆಯನ್ನು ಪರಿಶೀಲಿಸಿದ ಬಳಿಕವೇ ಸೂಕ್ತ ಆಂಟಿಬಯೋಟಿಕ್ ಆಯ್ಕೆ ಮಾಡಬೇಕು. ಅನಗತ್ಯ ಔಷಧಿ, ತಪ್ಪಾದ ಕಾಂಬಿನೇಷನ್, ತಪ್ಪು ಪ್ರಮಾಣ ಅಥವಾ ಅಗತ್ಯಕ್ಕಿಂತ ಹೆಚ್ಚಿನ ಅವಧಿಯ ಚಿಕಿತ್ಸೆಯನ್ನು ತಪ್ಪಿಸುವಂತೆ ವೈದ್ಯರಿಗೆ ಸೂಚಿಸಲಾಗಿದೆ.

ಫಾರ್ಮಸಿಸ್ಟ್, ರಿಟೈಲರ್‌ಗಳಿಗೆ ಸೂಚನೆ

ಔಷಧಿಗಳ ಮಾರಾಟದ ವೇಳೆ 1945ರ ಔಷಧ ನಿಯಮಗಳಡಿ ನಿಗದಿಪಡಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಶೆಡ್ಯೂಲ್ ಎಚ್, ಎಚ್1 ಸೇರಿದಂತೆ ಪ್ರಿಸ್ಕ್ರಿಪ್ಷನ್ ಅಗತ್ಯವಿರುವ ಔಷಧಿಗಳನ್ನು ಅನ್ವಯಿಸುವ ನಿಯಮಗಳಿಗೆ ವಿರುದ್ಧವಾಗಿ ಚಿಲ್ಲರೆ ಮಾರಾಟ ಮಾಡುವಂತಿಲ್ಲ.

ಫಾರ್ಮಸಿಸ್ಟ್‌ಗಳು ಮತ್ತು ರಿಟೈಲರ್‌ಗಳು ಆಂಟಿಬಯೋಟಿಕ್‌ಗಳು ಅಥವಾ ಪ್ರಿಸ್ಕ್ರಿಪ್ಷನ್ ಅಗತ್ಯವಿರುವ ಎನ್‌ಎಸ್‌ಎಐಡಿಎಸ್‌ಗಳನ್ನು ಸ್ವಯಂ ಚಿಕಿತ್ಸೆಯಾಗಿ ಬಳಸಲು ಜನರನ್ನು ಪ್ರೋತ್ಸಾಹಿಸಬಾರದು. ಔಷಧಿಯ ಲೇಬಲ್‌ನಲ್ಲಿರುವ ಎಚ್ಚರಿಕೆಗಳು ಹಾಗೂ ಮಾರಾಟದ ಷರತ್ತುಗಳನ್ನು ಪಾಲಿಸಬೇಕು. ಪ್ರಿಸ್ಕ್ರಿಪ್ಷನ್ ಔಷಧಿಗಳ ಮಾರಾಟಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಿಯಮಾನುಸಾರ ನಿರ್ವಹಿಸಬೇಕು.

ಸ್ವಯಂ ಚಿಕಿತ್ಸೆಗೆ ಬ್ರೇಕ್

ವೈದ್ಯರ ಸಲಹೆಯಿಲ್ಲದೆ ಆಂಟಿಬಯೋಟಿಕ್‌ಗಳನ್ನು ಸೇವಿಸುವುದು ಅಥವಾ ಹಿಂದಿನ ಪ್ರಿಸ್ಕ್ರಿಪ್ಷನ್ ಆಧರಿಸಿ ಮತ್ತೆ ಅದೇ ಔಷಧಿ ತೆಗೆದುಕೊಳ್ಳುವುದು ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಬಹುದು.

ಆಂಟಿಬಯೋಟಿಕ್‌ಗಳ ಅನಗತ್ಯ ಅಥ–ವಾ ತಪ್ಪಾದ ಬಳಕೆಯಿಂದ ಆಯಂಟಿಮೈಕ್ರೊಬಿಯಲ್ ರೆಸಿಸ್ಟೆನ್ಸ್ (ಎಎಂಆರ್) ಹೆಚ್ಚುವ ಅಪಾಯವಿದೆ. ಹೆಚ್ಚಿನ ವೈರಲ್ ಸೋಂಕುಗಳಿಗೆ ಆಂಟಿಬಯೋಟಿ–ಕ್‌ಗಳು ಪರಿಣಾಮಕಾರಿಯಾಗುವುದಿಲ್ಲ. ಹೀಗಾಗಿ "ಮಾತ್ರೆ ಬೇಕು, ಕೊಡಿ" ಎನ್ನುವ ಗ್ರಾಹಕ–ರಿಗೆ ನಿಯಮಕ್ಕೆ ಒಳಪಡುವ ಔಷಧಿಗಳನ್ನು ಪ್ರಿಸ್ಕ್ರಿಪ್ಷನ್ ಇಲ್ಲದೆ ನೀಡದಂತೆ ಹೊಸ ಸಲಹಾ ಮಾರ್ಗಸೂಚಿ ಮತ್ತೊಮ್ಮೆ ಸ್ಪಷ್ಟಪಡಿಸಿದೆ.

ನಿಯಮ ಉಲ್ಲಂಘಿಸಿದರೆ ಕ್ರಮ

ಔಷಧಿಗಳ ಮಾರಾಟ ಮತ್ತು ವಿತರಣೆಗೆ ಸಂಬಂಧಿಸಿದ ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆ ಹಾಗೂ ಅದರಡಿ ರೂಪಿಸಲಾದ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಬಹುದು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka